
ಜನಪ್ರಿಯ ಕಲಾಮಾಲಿಕೆ

ಕರ್ನಾಟಕದ

ಸಾಂಪ್ರದಾಯಿಕ ಶಿಲ್ಪಕಲೆ



ಪ್ರೊ॥ ಶೀಲಾಕಾಂತ ಪತ್ತಾರ

ಕರ್ನಾಟಕ ಲಲಿತಕಲಾ ಅಕಾಡೆಮಿ

ಕರ್ನಾಟಕದ
ಸಾಂಪ್ರದಾಯಿಕ ಶಿಲ್ಪಕಲೆ

ಪ್ರೊ|| ಶೀಲಾಕಾಂತ ಪತ್ತಾರ

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-560 002

KARNATAKADA SAMPRADAYIKA SHILPAKALE
by Prof. Sheelakantha Pattara
Published by K. Mukundan, Registrar
Karnataka Lalithakala Academy
Nrupatunga Road, Bangalore-560 002

First Impression : 1995

ಬೆಲೆ : ರೂ. 5-00

ಮುಖಚಿತ್ರ : **ಚಾಲುಕ್ಯರ ಶಿಲ್ಪಕಲೆ**

ಸಂಪಾದಕರು : **ಚಿ. ಸು. ಕೃಷ್ಣಸೆಟ್ಟಿ**

ಮುದ್ರಣ
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು-18
ದೂರವಾಣಿ: 6618752, 6613123

ಒಂದು ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯು ಇದುವರೆಗೆ ಕಲೆ ಮತ್ತು ಕಲಾವಿದರಿಗೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದಿದೆ. ಪ್ರಸ್ತುತ ಅಕಾಡೆಮಿಯು ಜನಪ್ರಿಯ ಕಲಾ ಮಾಲಿಕೆಯಡಿಯಲ್ಲಿ ಸುಲಭ ದರದಲ್ಲಿ ಜನಸಾಮಾನ್ಯರಿಗೂ ಕಲೆಯು ಅರ್ಥವಾಗಲಿ ಎಂಬ ಉದ್ದೇಶದಿಂದ ದೃಶ್ಯಕಲೆ, ಕಲೆಯ ರಸಸ್ವಾದನೆ, ಕಲಾ ಪಂಥಗಳು ಈ ವಿಷಯವಾಗಿ ಕಿರು ಪುಸ್ತಕಗಳನ್ನು ಹೊರತರುತ್ತಿದೆ.

ಈ ಮಾಲಿಕೆಯ ಪುಸ್ತಕಗಳನ್ನು ಓದುವುದರಿಂದ ಜನಸಾಮಾನ್ಯರಲ್ಲಿ ಕಲಾ ಇತಿಹಾಸವನ್ನು ಪರಿಚಯಿಸುತ್ತಾ ಕಲಾಕೃತಿಯನ್ನು ನೋಡಿ, ಗ್ರಹಿಸಿ, ರಸಸ್ವಾದನೆ ಮಾಡಿ ಗುಣ ಮೌಲ್ಯಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿ ಉತ್ತಮ ಗುಣ ಮೌಲ್ಯವುಳ್ಳ ಕಲಾಕೃತಿಯನ್ನು ಸಂಗ್ರಹಿಸುವಲ್ಲಿ ಆಸಕ್ತಿ ಮೂಡುತ್ತದೆಯೆಂಬ ಆಶಯ ನಮ್ಮದಾಗಿದೆ.

ಈ ಮಾಲಿಕೆಯಲ್ಲಿ ಪುಸ್ತಕಗಳನ್ನು ಚಿತ್ರಯಾತ್ರೆಯ ಸಂದರ್ಭದಲ್ಲಿ ಹೊರತರುತ್ತಿರುವುದು ಔಚಿತ್ಯಪೂರ್ಣವಾಗಿದೆ. ಚಿತ್ರಯಾತ್ರೆಯು ನಾಡಿನಾದ್ಯಂತ ಸಂಚರಿಸುವಾಗ ಎಲ್ಲಾ ಪುಸ್ತಕಗಳು ನಾಡಿನ ಮೂಲೆ ಮೂಲೆಗೂ ತಲುಪಬೇಕೆಂಬುದು ನಮ್ಮ ಉದ್ದೇಶವಾಗಿದೆ. ಈ ಮಾಲಿಕೆಯಲ್ಲಿ ಬರೆದಿರುವ ಲೇಖಕರೆಲ್ಲರೂ ಸಂಬಂಧಪಟ್ಟ ವಿಷಯದಲ್ಲಿ ಪರಿಣತರೇ ಆಗಿದ್ದಾರೆ. ನಮಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಈ ಕಿರುಹೊತ್ತಿಗೆಗಳನ್ನು ಬರೆದುಕೊಟ್ಟ ಕಲಾ ಲೇಖಕರಿಗೆ ಆಭಾರಿಯಾಗಿದ್ದೇವೆ. ನಮ್ಮ ಈ ಪ್ರಯತ್ನವನ್ನು ಕಲಾವಿದರೂ, ಕಲಾಸಕ್ತರೂ ತುಂಬು ಹೃದಯದಿಂದ ಸ್ವಾಗತಿಸಿ ಪ್ರೋತ್ಸಾಹಿಸುತ್ತಾರೆಂದು ನಂಬಿದ್ದೇವೆ.

ಸಿ. ಚಂದ್ರಶೇಖರ
ಅಧ್ಯಕ್ಷರು

ಕರ್ನಾಟಕದ ಸಾಂಪ್ರದಾಯಿಕ ಶಿಲ್ಪಕಲೆ

ಶಿಲ್ಪ ಪರಂಪರೆ

ಮೂಲತಃ ಶಿಲ್ಪವೆಂದರೆ ಕೌಶಲ್ಯದಿಂದ ಕೂಡಿದ ಕೆಲಸವೆಂದರ್ಥ. ವೇದಕ್ಕೆ ಭಾಷ್ಯ ಬರೆದ ಸಾಯಣಾಚಾರ್ಯರು ಶಿಲ್ಪವನ್ನು ಕರ್ಮಕೌಶಲ್ಯವೆಂದು ವ್ಯಾಖ್ಯಾನಿಸಿದ್ದಾರೆ. ಸೃಷ್ಟಿಯೊಂದು ಶಿಲ್ಪವೆಂದೂ, ವಿಶ್ವಕರ್ಮನು ಶಿಲ್ಪಿಯೆಂದೂ ಋಗ್ವೇದವು ಬಣ್ಣಿಸಿದೆ. ಆದ್ದರಿಂದ ಸೃಷ್ಟಿಕರ್ತನಾದ ವಿಶ್ವಕರ್ಮನು ಮೊದಲ ಶಿಲ್ಪಿ. 'ಮಾನಸಾರ' ಎಂಬ ಶಾಸ್ತ್ರಗ್ರಂಥದಲ್ಲಿ ವಿಶ್ವಕರ್ಮನನ್ನು ಬ್ರಹ್ಮನ ಮಾನಸಪುತ್ರ ಎಂದು ಕರೆಯಲಾಗಿದೆ. ಆತ ದೇವತೆಗಳ ಶಿಲ್ಪಿ.

ವೇದ ವಾಙ್ಮಯದಲ್ಲಿ ಗೃಹೋಪಯೋಗಿ ವಸ್ತುಗಳ ನಿರ್ಮಾಣ, ರಥ ಮೊದಲಾದ ವಾಹನಗಳ ನಿರ್ಮಾಣ, ಧನುಸ್ಸು ಮೊದಲಾದ ಆಯುಧಗಳ ನಿರ್ಮಾಣ ತಂತ್ರಗಳ ಪ್ರಸ್ತಾಪವಿದೆ. ಇವೆಲ್ಲ ಮೊದಮೊದಲು ಶಿಲ್ಪಕಲೆಯ ವ್ಯಾಪ್ತಿಗೇ ಸೇರಿದ್ದವು. ಅಷ್ಟುಮಾತ್ರವಲ್ಲ ವಾಸ್ತುಕಲೆ ಎಂದರೆ ಕಟ್ಟಡ ನಿರ್ಮಾಣ ಶಾಸ್ತ್ರವೆಂದೂ, ಶಿಲ್ಪಕಲೆ ಎಂದರೆ ಮೂರ್ತಿ ನಿರ್ಮಾಣ ಕಲೆಯೆಂದೂ ತಿಳಿಯಲಾಗಿದೆ.

ಶಿಲ್ಪಗ್ರಂಥಗಳು

ವೇದಕಾಲದಷ್ಟು ಹಿಂದೆಯೇ 'ದಾಕ್ಷಿಣಾತ್ಯ ವಾಸ್ತುಶಿಲ್ಪ' ಇದ್ದಿತೆಂದು ಬ್ರಾಹ್ಮಣಗಳಿಂದ ತಿಳಿದು ಬರುತ್ತದೆ. ವಿಶ್ವಕರ್ಮ, ಮಯ, ನಗ್ನಜಿತ, ನಾರದ, ಪುರಂದರ, ಗರ್ಗ, ಶುಕ್ರ, ಬೃಹಸ್ಪತಿ ಮೊದಲಾದ ಹದಿನೆಂಟು ಋಷಿಗಳು ವಾಸ್ತುವಿದ್ಯೆಯ ಮೂಲಪುರುಷರೆಂದು ನಂಬಲಾಗಿದೆ.

ಕ್ರಿ.ಪೂ. ಏಳನೆಯ ಶತಮಾನದಷ್ಟು ಹಿಂದೆಯೇ ಪಾಣಿನಿಯು ದೇವತಾ ಪ್ರತಿರೂಪಗಳನ್ನು ಪ್ರಸ್ತಾಪಿಸುತ್ತಾನೆ. ಮತ್ತು ಕ್ರಿ.ಪೂ. ಎರಡನೆಯ ಶತಮಾನದಲ್ಲಿ ಪತಂಜಲಿಯು ಶಿವ, ಸ್ಕಂದ ಮೊದಲಾದ ದೇವತೆಗಳ ಮೂರ್ತಿಗಳನ್ನು ಉಲ್ಲೇಖಿಸುತ್ತಾನೆ. ಗಾಂಧಾರ ಶಿಲ್ಪ ಪರಂಪರೆಯಲ್ಲಿ ಬುದ್ಧನ ಮೂರ್ತಿಗಳು ಕಾಣಿಸಿಕೊಳ್ಳುವ ಪೂರ್ವದಲ್ಲಿಯೇ ಬೌದ್ಧ ಸಂಪ್ರದಾಯದಲ್ಲಿ ಯಕ್ಷಪೂಜೆಯು ಪ್ರಚಲಿತವಾಗಿತ್ತು.

ವಿಷ್ಣುಧರ್ಮೋತ್ತರ ಪುರಾಣವು ಕ್ರಿ.ಶ. ನಾಲ್ಕನೆಯ ಶತಮಾನದ ವೇಳೆಗೆ ರಚಿತವಾಗಿರಬಹುದು. ಇದರಲ್ಲಿ ಸುಮಾರು ಐವತ್ತು ಅಧ್ಯಾಯಗಳು ಶಿಲ್ಪಕಲೆಗೆ ಮೀಸಲಾಗಿವೆ. ಶಿಲಾ ಪ್ರಕಾರಗಳು, ಶಿಲೆಯ ಆಯ್ಕೆ, ಶಿಲ್ಪ ತಯಾರಿಕೆ ಮುಂತಾದುವುಗಳ ಬಗ್ಗೆ ವಿಶ್ಲೇಷಣಾತ್ಮಕ ವಿವರಣೆಗಳಿವೆ. ಗಾರೆ ಇಟ್ಟಿಗೆಗಳ ಮೂರ್ತಿ ನಿರ್ಮಾಣದ ಬಗ್ಗೆ ಸುದೀರ್ಘ ಚರ್ಚೆ ಇದೆ.

ಆಗಮಗಳಲ್ಲಿ ಕೂಡ ಶಿಲ್ಪಶಾಸ್ತ್ರವು ಬಣ್ಣಿತವಾಗಿದೆ. ಇಪ್ಪತ್ತೆಂಟು ಆಗಮಗಳು

ಸಾಂದರ್ಭಿಕವಾಗಿ ಶಿಲ್ಪಶಾಸ್ತ್ರವನ್ನು ವಿವರಿಸುತ್ತವೆ. ಅವುಗಳಲ್ಲಿ ಕಾಮಿಕಾಗಮವು ಪ್ರಧಾನವಾಗಿ ಶಿಲ್ಪಶಾಸ್ತ್ರವನ್ನು ಪ್ರಸ್ತಾಪಿಸುತ್ತದೆ. ಇದು ಶೈವಾಗಮ. ವೈಷ್ಣವ ಸಂಪ್ರದಾಯದ ವೈಖಾನಸಾಗಮ ಇದರ ಸಮಕಾಲೀನ ಕೃತಿ. ಅವೆರಡೂ ಒಂಬತ್ತನೆಯ ಶತಮಾನದ ವೇಳೆಗೆ ಪ್ರಚಲಿತವಿದ್ದವು. ಆಗಮಗಳಲ್ಲಿ ಗುಡಿಯೊಳಗಿನ ಧಾರ್ಮಿಕ ವಿಧಿ ವಿಧಾನಗಳ ಪ್ರಸ್ತಾಪವಿದೆ.

ಭಾಗವತವು ಮೂರ್ತಿಗಳನ್ನು ಕಲ್ಲಿನವು, ರತ್ನದವು, ಮರದವು, ಲೋಹದವು, ಗಾರೆಗಚ್ಚಿನವು, ಮರಳಿನವು, ಚಿತ್ರದಲ್ಲಿ ಬಿಡಿಸಿದವು, ಮನಸ್ಸಿನಿಂದಲೇ ಮೂಡಿದವು-ಎಂದು ಎಂಟು ಪ್ರಕಾರಗಳನ್ನಾಗಿ ವಿಂಗಡಿಸಿದೆ. ಶಿಲೆ, ಕಾಷ್ಠ, ಮೃತ್ತಿಕೆ ಮತ್ತು ಲೋಹಗಳಂತೆ ರತ್ನವೂ ಶಿಲ್ಪನಿರ್ಮಾಣಕ್ಕೆ ಮಾಧ್ಯಮವಾಗಬಲ್ಲದೆಂದು ಅಜಿತಾಗಮವು ತಿಳಿಸುತ್ತದೆ. ಹಸ್ತಿದಂತದಲ್ಲಿಯೂ ಶಿಲ್ಪವನ್ನು ನಿರ್ಮಿಸಬಹುದು. ಹೀಗೆ ವಿವಿಧ ಮುಖ್ಯ ಮಾಧ್ಯಮಗಳಲ್ಲಿ ಮೂಡಿಬಂದ ಕರ್ನಾಟಕದ ಸಾಂಪ್ರದಾಯಿಕ ಶಿಲ್ಪಕಲೆಯ ಪಕ್ಷಿನೋಟ ಇಲ್ಲಿದೆ.

ಶಿಲಾಶಿಲ್ಪಗಳು

ಕರ್ನಾಟಕದಲ್ಲಿ ಅಶೋಕನ ಶಾಸನಗಳು ಲಭ್ಯವಾದಂತೆ ಆತನ ಕಾಲದ (ಕ್ರಿ.ಪೂ. ೩ನೆಯ ಶತ.) ಶಿಲ್ಪಗಳು ಲಭ್ಯವಿಲ್ಲ. ನಂತರದ ಶಾತವಾಹನರ ಶಿಲ್ಪಗಳು ಬನವಾಸಿ, ಸನ್ನತಿಯಲ್ಲಿ ದೊರೆತಿವೆ. ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿನ ಮೂರನೆಯ ಶತಮಾನಕ್ಕೆ ಸೇರಿದ ಐದು ಹೆಡೆಗಳ ನಾಗಪ್ರತಿಮೆ ಮತ್ತು ಸನ್ನತಿಯ ಸ್ತಂಭ ಶಿಲ್ಪಗಳನ್ನು ಇಲ್ಲಿ ಹೆಸರಿಸಬಹುದು.

ಕದಂಬ ಅರಸರು ವೈದಿಕ ಧರ್ಮದ ಪ್ರತಿಪಾದಕರಾಗಿದ್ದರು. ಅವರ ದೇವಾಲಯಗಳಲ್ಲಿ ಕಾಣಸಿಗುವ ಚೌಕಾಕಾರದ ಕಂಬಗಳು, ಸರಳ ಬಾಗಿಲುವಾಡಗಳು, ತುಸು ಉಬ್ಬುಗೆತ್ತನೆಯಿಂದ ಕೂಡಿದ ಅಲಂಕರಣಗಳು ಗಮನಿಸಬೇಕಾದ ಗುಣಲಕ್ಷಣಗಳು. ಹಲಸಿಯ ನರಸಿಂಹ ಮೂರ್ತಿ, ಇಡಗುಂಜಿ ಹಾಗೂ ಗೋಕರ್ಣದ ಗಣಪತಿ ಶಿಲ್ಪಗಳು ಕದಂಬರ ಕಾಲದ ಕಲಾಕೃತಿಗಳು. ಇವರಿಂದಾಗಿ ವಾಸ್ತು ಹಾಗೂ ಶಿಲ್ಪಕಲೆಯ ಹೆಜ್ಜೆಗಳು ನಿಚ್ಚಳವಾಗಿ ಮೂಡಿದವು. ವಿಶ್ವಕರ್ಮ, ಕವಿಕುಬ್ಜರು ಕದಂಬರ ಕಾಲದ ಶಾಸನದ ರೂವಾರಿಗಳೆಂದು ಖ್ಯಾತರಾಗಿದ್ದಾರೆ. ನಾಡಿನ ಕಲಾ ಪರಂಪರೆಗೆ ಕದಂಬರು ಶ್ರೀಕಾರ ಹಾಕಿದರು. ಅದನ್ನು ಮುಂದುವರೆಸಿ ಕಲಾ ಸೌರಭವನ್ನು ಪಸರಿಸಿದ ಖ್ಯಾತಿ ಬಾದಾಮಿಯ ಚಾಲುಕ್ಯ ಅರಸರಿಗೆ ಸಲ್ಲುತ್ತದೆ.

ಚಾಲುಕ್ಯ ಶಿಲ್ಪಕಲೆ

ಕರ್ನಾಟಕದಲ್ಲಿ ಶಿಲ್ಪ ನಿರ್ಮಾಣವು ದೊಡ್ಡ ಪ್ರಮಾಣದಲ್ಲಿ ನಡೆದದ್ದು ಬಾದಾಮಿ ಚಾಲುಕ್ಯರ ಕಾಲದಲ್ಲಿ. ಕ್ರಿ.ಶ. ಆರು ಮತ್ತು ಎಂಟನೆಯ ಶತಮಾನದ ಅವಧಿಯಲ್ಲಿ ಐಹೊಳೆ, ಬಾದಾಮಿ, ಪಟ್ಟದಕಲ್ಲು ಎಂಬ ತ್ರಿಪಾದಿಯ ಮೇಲೆ ಹದವಾದ ಕಲಾಪಾಕವನ್ನು ಸಿದ್ಧಗೊಳಿಸಿದ ಅಗ್ಗಳಿಕೆ ಚಾಲುಕ್ಯ ಕಲಾವಿದರದು. ಕದಂಬರಂತೆ ಇವರೂ ಧರ್ಮ, ನೀತಿಗಳನ್ನು ಜನರ ಮನದಂಗಳದಲ್ಲಿ ಬಿತ್ತಲು ಶಿಲ್ಪಕಲೆಯನ್ನು ಮಾಧ್ಯಮವಾಗಿ ಬಳಸಿದರು. ಪುರಾಣಗಳ ಕಥಾ ಪ್ರಸಂಗಗಳನ್ನು ಶಿಲಾಮೂರ್ತಿಗಳ ಮೂಲಕ ಬಿಂಬಿಸಿ ವೈದಿಕ ಧರ್ಮವನ್ನು ಜನತೆಗೆ ತಿಳಿಸುವ ಸಂಪ್ರದಾಯವನ್ನು ಚಾಲುಕ್ಯರು ಪ್ರಾರಂಭಿಸಿದರು. ಬಾದಾಮಿಯ

ಬಂಡೆಗಳನ್ನು ಕೊರೆದು ನಿರ್ಮಿಸಲಾದ ಗುಹಾದೇವಾಲಯಗಳ ತೊಲೆಗಳ ಮೇಲೆ; ಪಟ್ಟದಕಲ್ಲು, ಐಹೊಳೆಗಳಲ್ಲಿ ಕಟ್ಟಲಾದ ವಿರೂಪಾಕ್ಷ ಮಂದಿರ ಮತ್ತು ದುರ್ಗಾ ಗುಡಿಯ ಕಂಬಗಳ ಮೇಲೆ ಇಂಥ ಕಥಾ ಪ್ರಸಂಗಗಳನ್ನು ಕಾಣಬಹುದು. ರಾಮಾಯಣ, ಮಹಾಭಾರತ, ಭಾಗವತ, ಮತ್ತು ಶಿವಪುರಾಣ ಕಥೆಗಳು ಶಿಲೆಯಲ್ಲಿ ಬಿಂಬಿತವಾಗಿವೆ.

ಚಾಲುಕ್ಯ ಶಿಲ್ಪಗಳನ್ನು ಮುಖ್ಯವಾಗಿ ನಾಲ್ಕು ವಿಧಗಳಾಗಿ ಗುರುತಿಸಬಹುದು. ಗುಹಾಲಯದ ಗೋಡೆಗಳ ಮೇಲೆ ಕೊರೆದು ನಿರ್ಮಿಸಲಾದ ಬೃಹದಾಕಾರದ ದೇವಶಿಲ್ಪಗಳು ಒಂದನೆಯ ಬಗೆಯವು. ಬಾದಾಮಿಯ ಶೈವ ಗುಹೆಯಲ್ಲಿನ ೧೮ ಕೈಗಳುಳ್ಳ ನಟರಾಜ. ಅರ್ಧನಾರೀಶ್ವರ, ಹರಿಹರ, ಮೂರನೆಯ ಕಲ್ಮನೆಯಲ್ಲಿನ ಮಹಾವಿಷ್ಣು, ಪ್ರಸನ್ನವದನದ ನರಸಿಂಹ, ಭೂಮ್ಯಾಕಾಶಗಳನ್ನು ಆವರಿಸಿದ ತ್ರಿವಿಕ್ರಮ, ಭೂಪಾಲಕನಾದ ವರಾಹ, ಜಿನಾಲಯದಲ್ಲಿನ ಸುಪಾರ್ಶ್ವನಾಥ, ಬಾಹುಬಲಿ ಮೊದಲಾದವುಗಳನ್ನು ಇದಕ್ಕೆ ಹೆಸರಿಸಬಹುದು. ಐಹೊಳೆಯ ರಾವಣಫಡಿಯಲ್ಲಿನ ನಟರಾಜ, ಗಂಗಾಧರರೂ, ಅಲ್ಲಿನ ಜಿನ ಗುಹಾಲಯದ ಬಾಹುಬಲಿ ಹಾಗೂ ಪಾರ್ಶ್ವನಾಥರ ಮೂರ್ತಿಗಳೂ ಈ ಗುಂಪಿಗೆ ಸೇರಿದವುಗಳು.

ಪ್ರಾಚೀನ ಶಿಲ್ಪಗಳು ಕಲಾವಿದನ ಸ್ವಾತಂತ್ರ್ಯಕ್ಕೆ, ಕಲಾಭಿವ್ಯಕ್ತಿಗೆ ಕಡಿವಾಣ ಹಾಕುತ್ತವೆ ಎಂಬ ಮಾತು ಕೇಳಿಬರುತ್ತದೆ. ಬಗೆ ಬಗೆಯ ಗಾತ್ರಗಳಲ್ಲಿ, ಬಹು ಸಂಖ್ಯೆಯಲ್ಲಿ ನಟರಾಜ ಶಿಲ್ಪಗಳು, ಮಹಿಷ ಮರ್ದಿನಿ ವಿಗ್ರಹಗಳು, ವರಾಹ ಪ್ರತಿಮೆಗಳು, ಬಾದಾಮಿ, ಮಹಾಕೂಟ, ಪಟ್ಟದಕಲ್ಲು ಐಹೊಳೆಗಳಲ್ಲಿ ಚದುರಿಕೊಂಡಿರುವ ಯಾವ ಎರಡು ನಟರಾಜ ಮೂರ್ತಿಗಳಾಗಲಿ, ವರಾಹ ಶಿಲ್ಪಗಳಾಗಲಿ ಒಂದೇ ತೆರನಾಗಿಲ್ಲ ಎಂಬುದು ಗಮನಾರ್ಹ ಸಂಗತಿ. ಇದು ರೂವಾರಿಗಳಿಗಿದ್ದ ಕಲಾ ಸ್ವಾತಂತ್ರ್ಯಕ್ಕೆ ಕನ್ನಡಿ ಹಿಡಿಯುತ್ತದೆ ಎನ್ನಬಹುದಾಗಿದೆ.

ಮಧ್ಯಮ ಗಾತ್ರದ ಮೂರ್ತಿಗಳದು ಇನ್ನೊಂದು ವಿಧ. ಬಾದಾಮಿಯ ಮೂರನೆಯ ಗುಹಾಲಯದ ಕಂಬಗಳ ಬೋದಿಗೆಗಳ ಮೇಲಿನ ಸಾಲಭಂಜಿಕಾ, ರಸಿಕ ದಂಪತಿಗಳ ವಿಗ್ರಹಗಳು ಮತ್ತು ಪಟ್ಟದಕಲ್ಲಿನ ವಿರೂಪಾಕ್ಷ, ಮಲ್ಲಿಕಾರ್ಜುನ, ಐಹೊಳೆಯ ದುರ್ಗಾ, ನಾಗರಾಳದ ನಾಗನಾಥ-ಈ ಗುಡಿಗಳ ಕಂಬ, ಅರೆಗಂಬಗಳ ಮೇಲೆ ಬಿಂಬಿತರಾದ ಬಾಲೆಯರು, ರಸಿಕ ದಂಪತಿಗಳ ಶಿಲ್ಪಗಳು ಈ ಸಾಲಿಗೆ ಸೇರಿದವುಗಳು. ಚಾಲುಕ್ಯರು ಮದನಿಕೆ ವಿಗ್ರಹಗಳ ಪರಂಪರೆಯನ್ನು ಪ್ರಾರಂಭಿಸಿದರು. ಈ ಬಾಲೆಯರ ಕೇಶಾಲಂಕಾರ, ವಸ್ತ್ರಾಭರಣಗಳು, ಸಮಕಾಲೀನರ ಮನೋವಿಲಾಸಗಳನ್ನು ಪರಿಚಯಿಸುತ್ತವೆ.

ಈ ಮೇಲೆ ಪ್ರಸ್ತಾಪಿಸಲಾದ ಪೌರಾಣಿಕ ಶಿಲ್ಪ ಪಟ್ಟಿಕೆಗಳು ಮೂರನೆಯ ಗುಂಪಿಗೆ ಸೇರುತ್ತವೆ. ಸಮುದ್ರ ಮಥನ, ಕೃಷ್ಣಲೀಲೆ, ಸುರಾಸುರಯುದ್ಧ, ಗಿರಿಜಾ ಕಲ್ಯಾಣ, ಮೊದಲಾದ ಸಂದರ್ಭಗಳು ಗುಹಾಲಯದ ತೊಲೆಗಳ ಮೇಲೆ, ದುರ್ಗಾ(ಐಹೊಳೆ), ಮಹಾಕೂಟೇಶ್ವರ (ಮಹಾಕೂಟ) ಮೊದಲಾದ ಮಂದಿರಗಳ ಅಧಿಷ್ಠಾನದಲ್ಲಿ ಚಿತ್ರಿತವಾಗಿವೆ. ಮೊದಲಬಾರಿಗೆ ಪಂಚತಂತ್ರ ಕಥೆಗಳನ್ನು ಕಲ್ಲಿನಲ್ಲಿ ಕಂಡರಿಸಿದ ಖ್ಯಾತಿ ಚಾಲುಕ್ಯ ರೂವಾರಿಗಳಿಗೆ ಸಲ್ಲುತ್ತದೆ.

ಪುಟ್ಟಗಣಗಳ ಸಾಲುಗಳು ಚಾಲುಕ್ಯ ಶಿಲ್ಪಕಲೆಯ ಇನ್ನೊಂದು ವಿಶೇಷ. ಬೃಹತ್ ಶಿಲ್ಪಗಳ ಕೆಳಗೆ ಮೇಳಗಳ ಮೂರ್ತಿಗಳನ್ನು ಪ್ರಧಾನ ವಿಗ್ರಹಕ್ಕೆ ಹೆಚ್ಚಿನ ಕಳೆ ನೀಡುವಂತೆ ಕೆತ್ತಲಾಗಿದೆ. ಗುಹಾಲಯ ಅಥವಾ ದೇವಾಲಯದ ಪಾವಟಿಗೆಗಳ ಎಡಬಲಗಳಲ್ಲಿ ಈ ಪುಟ್ಟಗಣಗಳ ಸಾಲುಗಳು ಕಲಾರಸಿಕರನ್ನು ಕೈಮಾಡಿ ಕರೆಯುತ್ತವೆ. ಸಂಗೀತಗಾರರ ಸಮೂಹ ಒಂದಾದರೆ ಸೈನಿಕರ ಸಾಲು ಮತ್ತೊಂದು. ಆ ಕಾಲದ ಸಾಮಾಜಿಕ ಜೀವನದ ಕನ್ನಡಿಯಾಗಿ ಈ ಪುಟ್ಟ ಶಿಲ್ಪಗಳು ಮೂಡಿಬಂದಿವೆ. ಅಲ್ಲದೆ ಚಾಲುಕ್ಯ ಮಂದಿರಗಳ ಬಾಗಿಲುವಾಡಗಳಲ್ಲಿ ನಾನಾ ತರದ ಹೂಬಳ್ಳಿಗಳು, ಪಶುಪಕ್ಷಿಗಳು ಮತ್ತು ಚತ್ತಿನಲ್ಲಿರುವ ಗಂಧರ್ವ ದಂಪತಿಗಳು, ಪಕ್ಕದ ಯಾಳಿಗಳು ಆ ಕಲಾವಿದರ ಅಗಾಧ ಕಲ್ಪನಾ ಶಕ್ತಿಯನ್ನು ಪರಿಚಯಿಸುತ್ತವೆ.

ಚಾಲುಕ್ಯರ ಕಾಲದ ನೂರಾರು ಶಿಲ್ಪಿಗಳ ಹೆಸರುಗಳು ಶಾಸನಗಳಿಂದ ತಿಳಿದುಬರುತ್ತವೆ. ಬಾದಾಮಿ ಪ್ರದೇಶವು ಚಾಲುಕ್ಯರ ಕಲಾ ಪ್ರಯೋಗಶಾಲೆ ಎನಿಸಿದೆ. ವಾಸ್ತುಕಲೆಯಲ್ಲಿ ದ್ರಾವಿಡ, ನಾಗರ ಶೈಲಿಗಳನ್ನು ಮೇಳೈಸಿಕೊಂಡು ವೇಸರ ಶೈಲಿಯನ್ನು ಆವಿಷ್ಕಾರಗೊಳಿಸಿದ ಹಿರಿಮೆ ಚಾಲುಕ್ಯ ಸ್ಥಪತಿಗಳದ್ದು. ಬಾದಾಮಿ ಮಾಲೆಗಿತ್ತಿ ಮಂದಿರವನ್ನು ನಿರ್ಮಿಸಿದ ಆರ್ಯಮಿಂಚಿ ಉಪಾಧ್ಯಾಯ, ಪಟ್ಟದಕಲ್ಲಿನ ವಿರೂಪಾಕ್ಷ ಗುಡಿಯನ್ನು ರೂಪಿಸಿದ ಸರ್ವಸಿದ್ಧಿ ಆಚಾರಿ, ಗುಂಡ ಅನಿವಾರಿತಾಚಾರಿ ಮತ್ತು ಐಹೊಳೆಯ ವಾಸ್ತು ವಿಜ್ಞಾನಿ ನರಸೊಬ್ಬ ಮೊದಲಾದವರು ವಿಖ್ಯಾತರು. ಪ್ರಪ್ರಥಮ ತ್ರಿಕೂಟಾಲಯವನ್ನು ಕಟ್ಟಿದ ಹಿರಿಮೆ ಚಾಲುಕ್ಯ ಶಿಲ್ಪಿಗಳದ್ದು. ಬಾದಾಮಿಯ ಜಂಬುಲಿಂಗ ಗುಡಿ ಕರ್ನಾಟಕದ ಮೊದಲ ತ್ರಿಕೂಟಾಲಯ. ಮರಳುಗಲ್ಲಿನಲ್ಲಿ ಮೂಡಿಬಂದ ಚಾಲುಕ್ಯರ ವಾಸ್ತು ಹಾಗೂ ಶಿಲ್ಪಕಲೆಗಳು ಕಲಾ ಪ್ರಪಂಚಕ್ಕೆ ಅದ್ಭುತ ಕೊಡುಗೆಗಳೆನಿಸಿವೆ.

ಗಂಗರ ಶಿಲ್ಪಕಲೆ

ಬಾದಾಮಿಯಲ್ಲಿ ಚಾಲುಕ್ಯರು ರಾಜ್ಯಭಾರ ಮಾಡುತ್ತಿದ್ದ ಕಾಲದಲ್ಲಿ ತಲಕಾಡಿನಲ್ಲಿ ಗಂಗರು ಆಳುತ್ತಿದ್ದರು. ಆದಾಗ್ಯೂ ಕಲಾ ನಿರ್ಮಿತಿಯಲ್ಲಿ ಚಾಲುಕ್ಯರ ಶಿಲ್ಪ ಹಾಗೂ ವಾಸ್ತು ಕಲೆಗಳ ಪ್ರಭಾವ ಹೆಚ್ಚು ಎದ್ದು ಕಾಣದೆ ಇರುವುದು ಆಶ್ಚರ್ಯಕರ. ಗಂಗರ ದೇವಾಲಯಗಳು ಚಿಕ್ಕವು. ಆದ್ದರಿಂದ ಮೂರ್ತಿಗಳೂ ಚಿಕ್ಕವು ಗಂಗರ ಶಿಲ್ಪಗಳು ಹೆಚ್ಚಾಗಿ ಗಟ್ಟಿಯಾದ ಕಪ್ಪುಕಲ್ಲಿನಲ್ಲಿ ನಿರ್ಮಿತವಾಗಿವೆ. ಮಾಧ್ಯಮದ ಕಾಠಿನ್ಯದಿಂದಾಗಿ ದುಂಡು ಶಿಲ್ಪಗಳಿಗಿಂತ ಉಬ್ಬು ಶಿಲ್ಪಗಳಿಗೆ ಹೆಚ್ಚಿನ ಪ್ರಾಧಾನ್ಯ ದೊರೆತಿದೆ. ಗಂಗರ ಶಿಲ್ಪಕಲೆ ಕೂಡ ಧಾರ್ಮಿಕ ಹಿನ್ನೆಲೆಯಲ್ಲಿ ರೂಪುಗೊಂಡಿತು. ಇವರಲ್ಲಿ ಶಿವಲಿಂಗ, ವಿಷ್ಣು, ಸೂರ್ಯ, ಸಪ್ತಮಾತೃಕೆಯರು, ಗಣಪತಿ, ನಂದಿ, ಮಹಿಷಮರ್ದಿನಿ ಮೂರ್ತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತವೆ. ಗಂಗರ ದೇವಾಲಯಗಳು ಹೊರಗಡೆ ಸಾಮಾನ್ಯವೆಂಬಂತೆ ಕಂಡು ಬಂದರೂ ಒಳಗಡೆ ಶಿಲ್ಪಸಿರಿಯನ್ನು ಹೊಂದಿದ್ದುದು ಕಂಡುಬರುತ್ತದೆ. ನೊಣವಿನಕೆರೆ, ಹಳೆ ಆಲೂರು, ಅರಳಗುಪ್ಪೆ ಮೊದಲಾದ ಕಡೆಗಳಲ್ಲಿ ಗಂಗರ ಶಿಲ್ಪ ವೈವಿಧ್ಯವನ್ನು ನೋಡಬಹುದು. ಪ್ರಾಚೀನತೆಯ ದೃಷ್ಟಿಯಿಂದ ದೇವರಹಳ್ಳಿ, ಕೂಡಲೂರು, ಮತ್ತು ತಲಕಾಡಿನ ವಿಗ್ರಹಗಳು ಗಮನಾರ್ಹವಾದವುಗಳು.

ಸು. ೧೧ನೆಯ ಶತಮಾನದವರೆಗೂ ಬಾಳಿದ ಗಂಗ ವಂಶವು ಅನೇಕ ಬಸದಿಗಳನ್ನು ನಿರ್ಮಿಸಿದ ಖ್ಯಾತಿ ಪಡೆದಿದೆ. ಹೆಗ್ಗಡದೇವನಕೋಟೆ, ಕೊಳ್ಳೆಗಾಲ, ಸಾಲಿಗ್ರಾಮ, ಮಲೆಯೂರು, ಹಳೆಬೆಳಗೊಳ, ದೊಡ್ಡಬೇಗೂರು, ಕಂಬದ ಹಳ್ಳಿ, ಚಿಕ್ಕಹನಸೋಗೆ, ಚಾಮರಾಜನಗರ, ಆಲಗೋಡು, ಶ್ರೀರಂಗಪಟ್ಟಣ, ಮೂಗೂರು ಮೊದಲಾದ ಊರುಗಳಲ್ಲಿ ಗಂಗರ ಕಾಲದ ಜಿನ ಪ್ರತಿಮೆಗಳನ್ನು ನೋಡಬಹುದು. ಆ ಎಲ್ಲ ಶಿಲ್ಪಗಳ ಶಿರೋಮಣಿ ಎಂದರೆ ಶ್ರವಣಬೆಳಗೊಳದ ಗೊಮ್ಮಟನ ಶಿಲ್ಪ. ಚಾವುಂಡರಾಯನೆಂಬ ಗಂಗರ ಮಂತ್ರಿಯು ಇದನ್ನು ಸು.ಕ್ರಿ. ೯೮೭ರಲ್ಲಿ ಕೆತ್ತಿಸಿದ. ಇದೊಂದು ಏಕಶಿಲಾ ಪ್ರತಿಮೆ. ಭಾರತೀಯ ಶಿಲ್ಪಗಳಲ್ಲೇ ಅತ್ಯುನ್ನತ ವಿಗ್ರಹ. ೫೮ ಅಡಿ ಎತ್ತರದ ಈ ಭವ್ಯ ಮೂರ್ತಿಯ ಘನತೆಗೆ ಸಾಟಿಯಾದ ಶಿಲ್ಪ ಇನ್ನೊಂದಿಲ್ಲ, ಯಾವ ಶಿಲ್ಪಿಯ ಕೈಚಳಕವಿದು ಎಂಬುದು ಮಾತ್ರ ನಿಶ್ಚಿತವಾಗಿ ತಿಳಿಯದು.

ರಾಷ್ಟ್ರಕೂಟರ ಶಿಲ್ಪಕಲೆ

ಚಾಲುಕ್ಯರ ನಂತರ ಈ ನಾಡನ್ನು ರಾಷ್ಟ್ರಕೂಟರು ಕ್ರಿ.ಶ. ೮ರಿಂದ ೧೦ನೆಯ ಶತಮಾನಗಳವರೆಗೆ ಆಳಿದರು. ಚಾಲುಕ್ಯರ ಕಲಾ ಸಂಪ್ರದಾಯವನ್ನು ಮುಂದುವರೆಸುತ್ತ ಇವರು ಕೂಡ ಜೈನ ಹಾಗೂ ಹಿಂದೂ ಧರ್ಮಗಳಿಗೆ ಸಂಬಂಧಿಸಿದ ಗುಹಾಲಯಗಳನ್ನು ಕೊರೆಯಿಸಿದರು; ದೇವಾಲಯಗಳನ್ನು ಕಟ್ಟಿಸಿದರು. ಇಂದಿನ ಕರ್ನಾಟಕದಲ್ಲಿ ರಾಷ್ಟ್ರಕೂಟರ ಗುಡಿಗಳು ಐಹೊಳೆ, ಪಟ್ಟದಕಲ್ಲು, ಸಿರಿವಾಳ, ಹಳ್ಳೂರ, ಸವಡಿ, ಕುಕನೂರು, ಇಂಡಿ, ಶ್ರವಣಬೆಳಗೊಳ, ರೋಣ, ಲಕ್ಕುಂಡಿ ಲಕ್ಷ್ಮೇಶ್ವರ, ನರೇಗಲ್ಲ , ಮಹಾಕೂಟ, ಗದಗ ಮೊದಲಾದ ಕಡೆಗಳಲ್ಲಿ ಹರಡಿವೆ. ಅವುಗಳಲ್ಲಿ ಕುಕನೂರಿನ ನವಲಿಂಗ ದೇವಾಲಯ, ಶ್ರವಣಬೆಳಗೊಳದ ಚಂದ್ರಗಿರಿಯ ಮೇಲಿನ ಬಸದಿಗಳು, ಐಹೊಳೆಯ ಅಂಬಿಗೇರಿ ಗುಡಿ, ಅಲ್ಲಿಬಸಪ್ಪ ಗುಡಿಗಳು, ಪಟ್ಟದಕಲ್ಲಿನ ಜೈನ ಬಸದಿ ಮತ್ತು ಇಂಡಿಯ ಮಲ್ಲಿಕಾರ್ಜುನ ದೇವಾಲಯ ಮೊದಲಾದವುಗಳು ಮಹತ್ವದ ದೇವಾಲಯಗಳು.

ಸೋಜಿಗವೆನಿಸುವ ರೀತಿಯಲ್ಲಿ ರಾಷ್ಟ್ರಕೂಟರ ಅತ್ಯುತ್ತಮ ಕಲಾ ನಿರ್ಮಿತಿಗಳು ಇಂದಿನ ಕರ್ನಾಟಕದ ಗಡಿಯಾಚೆ ಉಳಿದುಕೊಂಡಿವೆ. ರಜತ ಮಂದಿರಗಳ ರಚನೆಯಷ್ಟೇ ಕೊರೆದ ಗುಹಾಲಯಗಳಿಗೆ ಗಮನ ಕೊಟ್ಟವರು ರಾಷ್ಟ್ರಕೂಟರು. ಎಲ್ಲೋರಾ ಜೋಗೇಶ್ವರಿ, ಎಲಿಫಂಟಾ ಗುಹೆಗಳು ಮತ್ತು ಎಲ್ಲೋರಾದ ಏಕಶಿಲಾ ನಿರ್ಮಿತ ಕೈಲಾಸ ದೇವಾಲಯ - ಇವು ರಾಷ್ಟ್ರಕೂಟರ ಕಲಾ ಸಾಹಸಗಳಾಗಿವೆ.

ಮುಂಬೈ ಹತ್ತಿರದ ನಡುಗಡ್ಡೆಯ ಕಲ್ಬೆಟ್ಟದಲ್ಲಿ ಇಪ್ಪತ್ತು ಬೃಹದಾಕಾರದ ಕಂಬಗಳನ್ನು ಹೊಂದಿದ ಮಹಾಮಂಟಪವನ್ನು ಕೊರೆಯಲಾಗಿದೆ. ಇದು ಎಲಿಫಂಟಾ ಗುಹೆ. ಇಲ್ಲಿನ ೧೮ ಅಡಿ ಎತ್ತರದ ತ್ರಿಮೂರ್ತಿ ಶಿಲ್ಪವು ಪ್ರಖ್ಯಾತವಾಗಿದೆ. ಇದು ರಾಷ್ಟ್ರಕೂಟ ಶಿಲ್ಪಗಳ ಉತ್ಕೃಷ್ಟ ಮಾದರಿಗಳಲ್ಲಿ ಒಂದು. ತ್ರಿಮೂರ್ತಿಯ ಮಧ್ಯದ ಮುಖವು ಕಂಠಾಭರಣಗಳಿಂದ ಶೋಭಿತವಾಗಿದೆ. ಇದು ಶಿವನ ಮುಖ. ಭಯಾನಕವಾದ ಎಡಮೊಗವು ಭೈರವನದಾದರೆ ಮೂರನೆಯದು ಅರ್ಧನಾರಿ ಶಿವನದು. ರೂವಾರಿಯ ಕಲ್ಪನೆ ಮೆಚ್ಚುವಂತಹದಾಗಿದೆ. ಶಿವಯೋಗೀಶ್ವರ, ಗಂಗಾಧರ, ಶಿವ, ನಟರಾಜ ಮೊದಲಾದವು ಇಲ್ಲಿನ ಇನ್ನಿತರ ಪ್ರಮುಖ ವಿಗ್ರಹಗಳು.

ರಾಷ್ಟ್ರಕೂಟರ ಶಿಲ್ಪಕಲೆಯ ಪರಾಕಾಷ್ಠೆಯನ್ನು ಎಲ್ಲೋರಾದ ಕೈಲಾಸ ದೇವಾಲಯದಲ್ಲಿ ಕಾಣುತ್ತೇವೆ. ಒಂದನೆಯ ಕೃಷ್ಣನು ಕೊರೆಯಿಸಿದ ಈ ಮಂದಿರವು ವಾಸ್ತು ಅದ್ಭುತವೆನಿಸಿದ; ಶಿಲ್ಪ ಚಮತ್ಕಾರವೆನಿಸಿದೆ. ಇಂಥ ಕಲಾಕೃತಿ ಪ್ರಪಂಚದಲ್ಲಿ ಇನ್ನೆಲ್ಲೂ ಸಿಗದು ಎನ್ನಲಾಗಿದೆ. ಒಂದು ಕಲ್ಬೆಟ್ಟವನ್ನು ಮೇಲಿನಿಂದ ತಳದವರೆಗೆ ಕೊರೆಯುತ್ತ ಮಂಟಪಗಳು, ದೇವಕೋಷ್ಠಗಳು, ದ್ರಾವಿಡ ಶೈಲಿಯ ಶಿಖರ ಮತ್ತು ಅನೇಕ ಶಿಲ್ಪಗಳನ್ನು ಕಂಡರಿಸಿದ ಬಗೆ ನಮ್ಮನ್ನು ಬೆರಗುಗೊಳಿಸುತ್ತದೆ. ಈ ಕೈಲಾಸ ದೇವಾಲಯವು ಶಿಲ್ಪ ಪ್ರಪಂಚಕ್ಕೆ ರಾಷ್ಟ್ರಕೂಟರು ನೀಡಿದ ಸರ್ವೋತ್ಕೃಷ್ಟ ಕೊಡುಗೆಯಾಗಿದೆ.

ರಾಷ್ಟ್ರಕೂಟರು ಚಾಲುಕ್ಯ ಶಿಲ್ಪ ಸಂಪ್ರದಾಯವನ್ನೇ ಅನುಸರಿಸಿದರು. ಚಾಲುಕ್ಯ ರಾಣಿ ಲೋಕ ಮಹಾದೇವಿಯು ಪಟ್ಟದಕಲ್ಲಿನಲ್ಲಿ ಕಟ್ಟಿಸಿದ ವಿರುಪಾಕ್ಷ ಗುಡಿಯ ವಿನ್ಯಾಸವನ್ನೇ ಮಾದರಿಯನ್ನಾಗಿಟ್ಟುಕೊಂಡು ಕೈಲಾಸ ದೇವಾಲಯವನ್ನು ಕೊರೆಯಿಸಿರುವುದು ಸುಸ್ಪಷ್ಟ. ದ್ರಾವಿಡ ಶಿಖರ ಶೈಲಿಯನ್ನು ಮಾತ್ರವಲ್ಲ, ವಿರೂಪಾಕ್ಷ ಗುಡಿಯಲ್ಲಿರುವ ಲಿಂಗೋದ್ಭವ ಶಿವನ ಮೂರ್ತಿ, ರಾವಣನು ಕೈಲಾಸ ಪರ್ವತವನ್ನು ಎತ್ತುವ ಪ್ರಸಂಗದ ಶಿಲ್ಪಗಳು ಅಲ್ಲಿನ ವಿವರಗಳೊಂದಿಗೆ ಸೃಷ್ಟಿಸಿರುವುದು ಗಮನಾರ್ಹವಾದುದು. ಈ ಏಕಶಿಲಾ ನಿರ್ಮಿತ ಮಂದಿರವು ಶಿಲ್ಪಸಿರಿಯನ್ನೇ ತನ್ನೊಡಲಿನಲ್ಲಿ ಇರಿಸಿಕೊಂಡಿದೆ. ಬ್ರಹ್ಮ, ಶಿವ, ಪಾರ್ವತಿ, ವಿಷ್ಣು, ಅಷ್ಟದಿಕ್ಪಾಲಕರು ಮತ್ತು ದಶಾವತಾರಗಳು, ಪೌರಾಣಿಕ ಪ್ರಸಂಗಗಳನ್ನು ಚಿತ್ರಿಸಿದ ಪಟ್ಟಿಕೆಗಳಿಂದ ಕೂಡಿ ಚೆಲುವಿನ ಮಡುವಾಗಿದೆ. ಸಪ್ತಮಾತೃಕೆಯರು, ಗಂಗಾ, ಯಮುನಾ ಮಹಿಷಾಸುರ ಮರ್ದಿನಿ, ಹಾಗೂ ಭವ್ಯ ಆನೆ ಮುಂತಾದ ಮೂರ್ತಿಗಳು ಕಲಾರಸಿಕರ ಕಣ್ಮನಗಳನ್ನು ತಣಿಸುತ್ತವೆ.

ಕಲ್ಯಾಣ ಚಾಲುಕ್ಯರ ಶಿಲ್ಪಕಲೆ

ಕ್ರಿ.ಶ. ೧೧-೧೨ ಶತಮಾನಗಳ ಅವಧಿಯಲ್ಲಿ ಕರ್ನಾಟಕವನ್ನಾಳಿದ ಕಲ್ಯಾಣ ಚಾಲುಕ್ಯರು ಕೂಡ ಕಲಾಕ್ಷೇತ್ರಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಕಲ್ಲಿನಲ್ಲಿ ಗುಹಾದೇವಾಲಯಗಳನ್ನು ಕೊರೆಯುವ ಸಂಪ್ರದಾಯವನ್ನು ಕೈಬಿಟ್ಟು ಮೆದುವಾದ ಕರಿಕಲ್ಲನ್ನು ಶಿಲ್ಪಗಳ ನಿರ್ಮಾಣಕ್ಕೂ ಬಳಸಿದರು. ಇದರ ಪರಿಣಾಮವಾಗಿ ಕರ್ನಾಟಕದ ಶಿಲ್ಪಕಲೆಯು ಹೊಸ ಸಂಪ್ರದಾಯವನ್ನು ರೂಢಿಸಿಕೊಂಡಿತು. ನಯ ನಾಜೂಕಿನ ಕೆತ್ತನೆಗೆ ಈ ಶಿಲೆ ಅನುಕೂಲಕರವಾದ್ದರಿಂದ ಕೀರ್ತಿಮುಖ, ಹೂಬಳ್ಳಿಗಳಿಂದ ಅಲಂಕೃತವಾದ ಶಿಲ್ಪಗಳು, ಕುಸುರಿನ ಕೆಲಸದ ಜಾಲಂಧ್ರಗಳು ಕಲೆಯ ಜಾಲವನ್ನೇ ಹೆಣೆದವು. ಕರ್ಣಾಭರಣ, ಕಂಠಹಾರ, ಶಿರಸ್ತ್ರಾಣ ಮೊದಲಾದ ಆಭರಣಗಳು ಶಿಲ್ಪಗಳನ್ನು ಶೃಂಗರಿಸಿದವು.

ಬಾದಾಮಿಯ ಚಾಲುಕ್ಯರು ಚೌಕಾಕಾರದ ಕಂಬಗಳನ್ನು ನಿರ್ಮಿಸಿದರೆ ಇವರು ಚರಕಿಯಂತ್ರ(Lathe)ವನ್ನು ಬಳಸಿ ದುಂಡಗಿನ ಕಂಬಗಳನ್ನು ಸೃಷ್ಟಿಸಿದರು. ತಮ್ಮ ನುಣುಪಾದ ಮೇಲ್ಮೈಯಿಂದಾಗಿ ಈ ಕಂಬಗಳು ವಿಶೇಷ ಶೋಭೆಯನ್ನು ತಂದವು, ಹೊಸತನವನ್ನು ನೀಡಿದವು. ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಬಾಗಿಲುವಾಡಗಳು ಮಂದಿರದ ಚೆಲುವನ್ನು ವೃದ್ಧಿಸಿದವು.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮಂದಿರ, ಬಸದಿಗಳ ನಿರ್ಮಾಣಕ್ಕಾಗಿ ರಾಜ




ಅಜಂತ




ಸಾಂಪ್ರದಾಯಿಕ ಶಿಲ್ಪ


ಚಾಲುಕ್ಯರ ಶಿಲ್ಪಕಲೆ


ಗಾರೆಗಚ್ಚುಶಿಲ್ಪ




ಹೊಯ್ಸಳ ಶಿಲ್ಪಕಲೆ



ಕರ್ನಾಟಕದ ಸಾಂಪ್ರದಾಯಿಕ ಶಿಲ್ಪಕಲೆ

ವಿಜಯನಗರ ಶಿಲ್ಪಕಲೆ



ಅಜಂತ



ವಿಜಯನಗರ ಶಿಲ್ಪಕಲೆ

ಕರ್ನಾಟಕದ ಸಾಂಪ್ರದಾಯಿಕ ಶಿಲ್ಪಕಲೆ

ಪರಿವಾರ ಮಾತ್ರವಲ್ಲ, ಮಂತ್ರಿ ವರ್ಗದವರೂ, ಶ್ರೀಮಂತ ಭಕ್ತರೂ ಕೈಗೂಡಿಸಿದರು. ಇಲ್ಲಿ ಮುಮ್ಮಡಿ ಸೋಮೇಶ್ವರ ಅರಸನ ಆಸಕ್ತಿ ಉಲ್ಲೇಖನೀಯ. ಶಿಲ್ಪ, ವಾಸ್ತು ಮತ್ತು ಚಿತ್ರಕಲೆಗಳ ಬಗ್ಗೆ ವಿವರಿಸುವ ಮಾನಸೋಲ್ಲಾಸ ಅಥವಾ ಅಭಿಲಷಿತಾರ್ಥ ಚಿಂತಾಮಣಿ ಎಂಬ ಶಾಸ್ತ್ರ ಗ್ರಂಥವನ್ನು ಆತ ರಚಿಸಿದ. ಕಲ್ಯಾಣ ಚಾಲುಕ್ಯರಿಂದ ನೂರಾರು ಶಿವಾಲಯಗಳು ಕಟ್ಟಲ್ಪಟ್ಟವು. ಜಿನಾಲಯಗಳ ಸಂಖ್ಯೆಯೇನೂ ಕಡಿಮೆ ಇಲ್ಲ.

ಹಳೆಯಬೀಡಿನ ದೇವಾಲಯವನ್ನು ಹೊರತು ಪಡಿಸಿದರೆ, ಡಂಬಳದಲ್ಲಿ ತಲೆ ಎತ್ತಿದ ಚಾಲುಕ್ಯರ ದೊಡ್ಡ ಬಸಪ್ಪ ದೇವಾಲಯವು ಕರ್ನಾಟಕದ ಅತಿ ಸುಂದರ ಮಂದಿರವೆಂದು ಕಲಾ ಇತಿಹಾಸಕಾರ ಜೇಮ್ಸ್ ಕಜಿನ್ಸ್ ಉದ್ಗರಿಸಿದ್ದಾರೆ. ಇಟಗಿಯ ಮಹಾದೇವ ಗುಡಿಯು ದೇವಾಲಯಗಳ ಚಕ್ರವರ್ತಿ ಎನಿಸಿದೆ. ಲಕ್ಕುಂಡಿಯ ಜೈನ ಬಸದಿಯು ಕಲ್ಯಾಣ ಚಾಲುಕ್ಯರ ಶಿಲ್ಪಕಲೆಯ ಬೆಳವಣಿಗೆಯಲ್ಲಿ ಇನ್ನೊಂದು ಮೈಲುಗಲ್ಲು. ನಾಗ-ನಾಗಿಣಿ, ಯಕ್ಷ-ಯಕ್ಷಿಯರು ಮೊದಲಾದ ವಿಗ್ರಹಗಳನ್ನು ಅಲಂಕಾರದಿಂದ ಬಗೆಬಗೆಯ ಆಭರಣಗಳಿಂದ ಶೃಂಗರಿಸಿರುವುದು ವಿಶೇಷ ಕೊಡುಗೆ ಎನಿಸಿದೆ. ಲಕ್ಕುಂಡಿಯ ಕಾಶಿವಿಶ್ವೇಶ್ವರ ಗುಡಿ, ಕುರವತ್ತಿಯ ಮಲ್ಲಿಕಾರ್ಜುನ ದೇವಾಲಯಗಳು ಶಿಲ್ಪಕಲೆಯ ಪಕ್ವತೆಗೆ ಸಾಕ್ಷಿ ನೀಡುತ್ತವೆ. ಕುರವತ್ತಿ ದೇವಾಲಯದ ಮದನಿಕಾ ಶಿಲ್ಪಗಳು ಸೂಕ್ಷ್ಮ ಕೆತ್ತನೆಗಳಿಂದಾಗಿ ಮನಮೋಹಕವಾಗಿವೆ. ಹಾಗೆಯೇ ಹಿರೆಮನ್ನೂರಿನ ವಿಷ್ಣುಮೂರ್ತಿ, ಜಲಸಂಗಿಯ ಶಾಸನ ಸುಂದರಿ, ಮದಿಹಾಳದ ಆನೆ ಮೊದಲಾದವು ಕರ್ನಾಟಕದ ಉತ್ಕೃಷ್ಟ ಶಿಲ್ಪಗಳ ಮಾಲಿಕೆಗೆ ಸೇರುತ್ತವೆ.

ಕುಕನೂರಿನ ಕಲ್ಲೇಶ್ವರ, ಅಬಲೂರಿನ ಬ್ರಹ್ಮೇಶ್ವರ, ಉಣಕಲ್ಲಿನ ಚಂದ್ರಮೌಳೇಶ್ವರ, ಗದಗನಲ್ಲಿನ ಸರಸ್ವತಿ, ಸೋಮೇಶ್ವರ, ತ್ರಿಕೂಟೇಶ್ವರ, ಚೌಡದಾನಪುರದ ಮುಕ್ತೇಶ್ವರ, ಲಕ್ಷ್ಮೇಶ್ವರ, ಸೋಮೇಶ್ವರ ಮತ್ತು ಬಸದಿ, ಹಾವೇರಿಯ ಸಿದ್ದೇಶ್ವರ, ಹಾನಗಲ್ಲಿನ ತಾರಕೇಶ್ವರ ಮೊದಲಾದ ಮಂದಿರಗಳು ಕಲ್ಯಾಣ ಚಾಲುಕ್ಯರ ಶಿಲ್ಪ ವೈಖರಿಯನ್ನು ಬಿಂಬಿಸುವ ಇತರ ದೇವಾಲಯಗಳು.

ಹೊಯ್ಸಳರ ಶಿಲ್ಪಕಲೆ

ಬಾದಾಮಿ ಚಾಲುಕ್ಯರ ಕಾಲದಲ್ಲಿ ಕರ್ನಾಟಕದ ಶಿಲ್ಪಕಲೆಯು ಮೊಗ್ಗಾಗಿ ಮೂಡಿ, ರಾಷ್ಟ್ರಕೂಟರು ಹಾಗೂ ಕಲ್ಯಾಣ ಚಾಲುಕ್ಯರ ಅವಧಿಯಲ್ಲಿ ಬಿರಿದು ಹೊಯ್ಸಳರ ಕಾಲದಲ್ಲಿ ಮಲ್ಲಿಗೆಯಾಗಿ ಅರಳಿತು. ಶಿಲ್ಪವೈರು ಹೊಯ್ಸಳರಿಂದಾಗಿ ಸಮೃದ್ಧವಾಗಿ ಬೆಳೆಯಿತು, ವ್ಯಾಪಕವಾಗಿ ಹರಡಿತು. ಬೇಲೂರು, ಹಳೆಯಬೀಡು ಮತ್ತು ಸೋಮನಾಥಪುರದ ದೇವಾಲಯಗಳು ಹೊಯ್ಸಳ ಕಲಾಶೈಲಿಯ ಉತ್ತುಂಗ ಶಿಖರಗಳು. ಸೌಂದರ್ಯ ದೃಷ್ಟಿಯಿಂದಲೂ, ಶಿಲ್ಪ ನೈಪುಣ್ಯದ ದೃಷ್ಟಿಯಿಂದಲೂ ಬೇಲೂರಿನ ಚೆನ್ನಕೇಶ್ವವ ದೇವಾಲಯವು ಪ್ರಬುದ್ಧ ಕಲಾನಿರ್ಮಿತಿ. ಅದು ನಿಜವಾಗಿಯೂ ಕಲೆಯ ಬಲೆ. ಅದರಲ್ಲಿ ಸಿಲುಕದ ಕಲಾರಸಿಕನಿಲ್ಲ. ಹೊಯ್ಸಳ ಶಿಲ್ಪಶೈಲಿಯನ್ನು ಪ್ರದರ್ಶಿಸುವ ಸುಮಾರು ೮೦ ದೇವಾಲಯಗಳು ಕರ್ನಾಟಕದಲ್ಲಿ ಚದುರಿಕೊಂಡಿವೆ. ಅವುಗಳಲ್ಲಿ ಕೆಲವು ಶಿವಾಲಯಗಳಾದರೆ ಇನ್ನು ಕೆಲವು ವಿಷ್ಣು ಮಂದಿರಗಳು, ಮತ್ತೆ ಕೆಲವು ಜಿನಾಲಯಗಳು. ಚಾಲುಕ್ಯರ ಔದಾರ್ಯವಾದ ಮತಸಹಿಷ್ಣುತೆಯನ್ನು ಹೊಯ್ಸಳರೂ ಮುಂದುವರೆಸಿದರು.

ಮೃದುವಾದ ಕೃಷ್ಣಶಿಲೆ ಕುಸುರಿನ ಕೆತ್ತನೆ ಮಾಡಲು ರೂವಾರಿಗಳನ್ನು ಹುರಿದುಂಬಿಸಿರಬೇಕು. ಅಂತೆಯೇ ಈ ಶಿಲ್ಪಿಗಳು ಶಿಲ್ಪಾಲಂಕರಣೆಗೇ ಹೆಚ್ಚಿನ ಪ್ರಾಮುಖ್ಯ ನೀಡಿದ್ದಾರೆ. ಇದರಿಂದಾಗಿ ಒಂದೊಂದು ಮಂದಿರವೂ ಒಂದೊಂದು ಪ್ರದರ್ಶನಾಲಯವೇ! ಶಿಲ್ಪ ನಿರ್ಮಾಣ ಕಲೆಯು ಕಲೆಯ ಪರಮೋಚ್ಚ ಶಿಖರವನ್ನೇ ಮುಟ್ಟಿದ ಹೊಯ್ಸಳ ಶಿಲ್ಪಿಯು ತನ್ನ ನಯ-ನಾಜೂಕಿನ ಗುಂಗಿನಲ್ಲಿ ಸಿಲುಕಿಕೊಂಡದ್ದು ಸುಸ್ಪಷ್ಟ. ಚಾಲುಕ್ಯರಂತೆ ಹೊಯ್ಸಳರಿಗೂ ಧರ್ಮವೇ ಕಲೆಗೆ ವಸ್ತು, ಉದ್ದೇಶ ಕೂಡ. ನೂರಾರು ಪೌರಾಣಿಕ ದೇವತೆಗಳು ಶಿಲಾ ಪ್ರತಿಮೆಗಳಾಗಿ ಹೊಯ್ಸಳ ದೇಗುಲಗಳಲ್ಲಿ ವಾಸ ಮಾಡಿದಂತೆ ಭಾಸವಾಗುತ್ತದೆ. ವೈಷ್ಣವ, ಶೈವ, ಶಾಕ್ತ, ಜೈನ ಎಂದು ಮುಂತಾಗಿ ಹಲವು ಗುಂಪುಗಳಿಗೆ ಸೇರಿದ ಶಿಲ್ಪಸಿರಿ ಹೊಯ್ಸಳರದು. ಶಿಲ್ಪ ಪ್ರದರ್ಶನಕ್ಕೆ ಅನುಕೂಲವಾಗುವಂತೆ ಎತ್ತರವಾದ ಜಗತಿ, ನಕ್ಷತ್ರಾಕಾರದ ತಲ ವಿನ್ಯಾಸದ ಭಿತ್ತಿಗಳನ್ನು ನಿರ್ಮಿಸಿದ್ದಾರೆ. ಈ ಭಿತ್ತಿಗಳ ಹೊರಭಾಗವು ಹಲವಾರು ಅಡ್ಡಪಟ್ಟಿಕೆಗಳಿಂದ ಅಲಂಕೃತವಾಗಿದೆ. ಆನೆ, ಸಿಂಹ, ಕುದುರೆ, ಹಂಸ ಮೊದಲಾದವುಗಳ ಸಾಲುಗಳಿವೆ. ಕೆಲವೆಡೆ ಅಶ್ವಾರೋಹಿಗಳು, ಸೈನಿಕರು ಸಾಲುಗಳಲ್ಲಿ ಚಿತ್ರಿತರಾಗಿದ್ದಾರೆ. ಇವುಗಳ ಮೇಲಿನ ಉಬ್ಬು ಶಿಲ್ಪಗಳು ಮಹಾಭಾರತ, ರಾಮಾಯಣದ ಪ್ರಸಂಗಗಳನ್ನು ಪ್ರತಿನಿಧಿಸುತ್ತವೆ. ಮಧ್ಯದಲ್ಲಿನ ಜಾಲಂಧ್ರಗಳು ಕಲಾಜಾಲಗಳೇ ಸರಿ.

ಹಳೆಯಬೀಡು, ಬೇಲೂರಿನ ದೇವಾಲಯಗಳ ಕಂಬಗಳು ಸ್ತ್ರೀ ಪ್ರತಿಮೆಗಳಿಂದ ಶೋಭಿತವಾಗಿವೆ. ಈ ವಿಗ್ರಹಗಳನ್ನು ಶಿಲಾಬಾಲಿಕೆ, ಸಾಲಭಂಜಿಕೆ, ಮದನಿಕೆ ಶಿಲ್ಪಗಳೆಂದು ಕರೆಯಲಾಗುತ್ತದೆ. ಈ ಚೆಲುವಾದ ದುಂಡುಶಿಲ್ಪಗಳು ಕರ್ನಾಟಕ ಶಿಲ್ಪ ಸರಸ್ವತಿಯ ಮುಕುಟ ಮಣಿಗಳೆನಿಸಿವೆ. ಆಭರಣಗಳಿಂದ ಸಿಂಗಾರಗೊಂಡ ಚೆಲುವೆಯರು ತಮ್ಮ ಅಂಗ ಸೌಂದರ್ಯವನ್ನು ಬಗೆಬಗೆಯ ಭಾವ-ಭಂಗಿಗಳೊಂದಿಗೆ ಪ್ರದರ್ಶಿಸಿದ್ದಾರೆ. ಈ ಮೋಹಕ ಭಂಗಿಗಳು ನೋಡುಗರನ್ನು ಕಲ್ಪನಾ ಲೋಕಕ್ಕೆ ಕರೆದೊಯ್ಯುತ್ತವೆ. ಶಿಲಾಬಾಲಿಕೆಯರ ಮೂರ್ತಿಗಳನ್ನು ಬೇಲೂರಿನ ಚೆನ್ನಕೇಶವ ಗುಡಿಯಲ್ಲಿ ಮಾತ್ರವಲ್ಲದೆ ಉಂಡಿಗನಾಳಿನ ಚೌಡೇಶ್ವರ ಮಂದಿರ, ಹಾಸನದ ವಿರೂಪಾಕ್ಷ ಗುಡಿ, ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯಗಳಲ್ಲಿಯೂ ನೋಡಬಹುದು.

ಮಂದಿರದ ಚತ್ತಿನಲ್ಲಿ ಕೆತ್ತಲಾದ ಭುವನೇಶ್ವರಿಗಳು ಹೊಯ್ಸಳ ಶಿಲ್ಪಕಲೆಯ ಇನ್ನೊಂದು ವಿಶೇಷತೆ. ಅವುಗಳ ಮಧ್ಯದಲ್ಲಿ ಕಾಣಿಸಿಕೊಳ್ಳುವ ಕಮಲದ ಮೊಗ್ಗುಗಳು, ಬಾಳೆಯ ಗೊನೆಗಳು ವೈಶಿಷ್ಟ್ಯಪೂರ್ಣವಾದವುಗಳು. ಅವುಗಳ ಸುತ್ತಲಿನ ಚಿತ್ರಪಟ್ಟಿಕೆಗಳಲ್ಲಿ ಬಗೆಬಗೆಯ ಶಿಲ್ಪಾವಳಿಗಳನ್ನು ಕಂಡರಿಸಲಾಗಿದೆ. ಭುವನೇಶ್ವರಿಗಳ ವಿನ್ಯಾಸ, ಬೆಡಗು ರಸಿಕರನ್ನು ಬೆರಗುಗೊಳಿಸುತ್ತವೆ.

ಹೊಯ್ಸಳ ದೇವಾಲಯಗಳ ವೈಷ್ಣವ ಮೂಲವಿಗ್ರಹಗಳು ಚೆಲುವಿನ ಬುಗ್ಗೆಗಳಾಗಿವೆ. ಶಂಖ-ಚಕ್ರಾದಿಗಳು, ಕಿರೀಟ, ಕಂಠಹಾರ, ಕರ್ಣಕುಂಡಲ ಮೊದಲಾದ ಆಭರಣಗಳಿಂದ ಈ ಪ್ರಧಾನ ಪ್ರತಿಮೆಗಳು ಶೋಭಿತವಾಗಿ ಮನಮೋಹಕವಾಗಿವೆ. ಶಿವಾಲಯಗಳ ಗರ್ಭಗೃಹಗಳಲ್ಲಿ ಲಿಂಗಗಳಿರುವುದರಿಂದ ಅಲ್ಲಿ ಕಲಾ ವೈವಿಧ್ಯಕ್ಕಾಗಲಿ, ನೈಪುಣ್ಯಕ್ಕಾಗಲಿ ಅವಕಾಶವಿಲ್ಲ. ಆದರೆ ಹೊರಗೂಡಿನಲ್ಲಿನ ಗಣೇಶ, ಷಣ್ಮುಖ, ದುರ್ಗಾ, ವೀರಭದ್ರ ಮೊದಲಾದ ಶಿಲ್ಪಗಳು ರೂವಾರಿಯ ಪ್ರತಿಭೆಯ ಅಭಿವ್ಯಕ್ತಿಗೆ ಅನುವು ಮಾಡಿಕೊಟ್ಟಿವೆ.

ಹೊಯ್ಸಳ ಶಿಲ್ಪಕಲೆಯ ವೈಶಿಷ್ಟ್ಯಗಳು ಅನೇಕ.ಈ ಕಲೆಯ ಒಂದು ನಿರ್ಣಾಯಕ ಶಿಲ್ಪವೆಂದರೆ ಹೊಯ್ಸಳರ ವೈಶಿಷ್ಟ್ಯಪೂರ್ಣವಾದ ರಾಜಲಾಂಛನ. ಇದು ಸಳನ ಕತೆಯನ್ನು ನೆನಪಿಸುವ ಸಳ-ಹುಲಿಗಳ ದುಂಡುಶಿಲ್ಪ. ಅಲಂಕೃತವಾದ ಬಾಗಿಲುವಾಡ ಈ ಶೈಲಿಯ ಇನ್ನೊಂದು ಪ್ರಧಾನ ಅಂಶ. ಪತ್ರ-ಪುಷ್ಪಗಳ ನಾಜೂಕಾದ ಕೆತ್ತನೆ, ಕೆಳಭಾಗದಲ್ಲಿ ರತಿಮನ್ಮಥ ಇಲ್ಲವೆ ದ್ವಾರಪಾಲಕರ ಉಬ್ಬುಶಿಲ್ಪಗಳು, ಲಲಾಟ ಬಿಂಬದ ಮೇಲೆ ಗಜಲಕ್ಷ್ಮಿ, ನಟರಾಜ ಇಲ್ಲವೆ ನರಸಿಂಹ ಮುಂತಾದ ಶಿಲ್ಪಗಳಿರುವುದು ಸಂಪ್ರದಾಯ. ಬಾಗಿಲು ಪಟ್ಟಿಯ ಮೇಲ್ಭಾಗದಲ್ಲಿ ಮಕರ ತೋರಣದ ಅಲಂಕಾರ ಹೊಯ್ಸಳ ಶಿಲ್ಪಕಲೆಯ ಮತ್ತೊಂದು ವಿಶೇಷ. ಈ ಮಕರ ತೋರಣಗಳು ಆ ಶಿಲ್ಪಿಗಳ ಅದ್ಭುತ ಕಲಾ ಪ್ರತಿಭೆಗೆ, ಹಸ್ತ ಕೌಶಲ್ಯಕ್ಕೆ ನಿದರ್ಶನಗಳಾಗಿವೆ. ಹಳೆಯಬೀಡಿನ ಹೊಯ್ಸಳೇಶ್ವರ ದೇವಾಲಯದ ದಕ್ಷಿಣದ ಬಾಗಿಲುವಾಡ ಹಾಗೂ ಮಕರ ತೋರಣ ಹೊಯ್ಸಳ ಶಿಲ್ಪಗಳಲ್ಲಿ ಮೇರುಕೃತಿಗಳೆನಿಸಿವೆ. ಈ ಶೈಲಿಯ ಇನ್ನೊಂದು ವೈಶಿಷ್ಟ್ಯವೆಂದರೆ ಸ್ತಂಭ ಸಮೂಹ. ನೋಡುಗರನ್ನು ಸ್ತಂಭೀಭೂತಗೊಳಿಸುವ ಸ್ತಂಭಗಳಿವು. ಅವುಗಳ ವೈವಿಧ್ಯಕ್ಕೆ ಎಲ್ಲೆ ಇಲ್ಲ. ಅಲಂಕರಣೆಗೆ ಸೀಮೆ ಇಲ್ಲ!

ಹೊಯ್ಸಳರ ಕಲೆ ಎಂದರೆ ಜಕ್ಕಣ್ಣನ ಶಿಲ್ಪಕಲೆ ಎಂಬುದು ಜನವಾಣಿ, ಕವಿವಾಣಿ. ಈ ನಿಟ್ಟಿನಲ್ಲಿ ಇನ್ನೂ ಸಂಶೋಧನೆ ನಡೆಯಬೇಕಿದೆ. ದಾಸೋಜ ಎಂಬಾತನು ಬೇಲೂರು, ಹಳೆಯಬೀಡು ಮತ್ತು ಕಿಕ್ಕೇರಿಯಲ್ಲಿ ಶಿಲ್ಪಕರ್ಮವ ಮಾಡಿದ ಖ್ಯಾತ ಶಿಲ್ಪಿ. ಈತನ ಮಗ ಚಾವಣನು 'ರೂವಾರಿ ಶರಭ ಭೇರುಂಡ'ನೆಂದು ಪ್ರಖ್ಯಾತನಾಗಿದ್ದಾನೆ. ಹೊಯ್ಸಳ ಶಿಲ್ಪಿಗಳಲ್ಲಿ ಅತ್ಯಂತ ಪ್ರಸಿದ್ಧನಾದವನು ಮಲ್ಲಿತಮ್ಮ. ಈತ ಹೆಸರಾಂತ ಸ್ಥಪತಿಯೂ ಆಗಿದ್ದ. ಮಾಚೋಜನು ಕಲಿಯುಗ ವಿಶ್ವಕರ್ಮನೆಂದು ಹೊಗಳಲ್ಪಟ್ಟಿದ್ದಾನೆ. ಹೀಗೆ ಹೊಯ್ಸಳ ರೂವಾರಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ವಿಜಯನಗರ ಶಿಲ್ಪಕಲೆ

ಹೊಯ್ಸಳರ ನಂತರ ಕರ್ನಾಟಕವನ್ನಾಳಿದ ವಿಜಯನಗರ ಅರಸರು ತಮ್ಮದೇ ಆದ ಸ್ವಂತಿಕೆಯನ್ನು ಶಿಲ್ಪಕಲೆಯಲ್ಲಿ ತೋರಿಸಿದ್ದಾರೆ. ಹಂಪೆಯಲ್ಲಿ ಅವರಿಗೆ ಲಭ್ಯವಾದ ಬೆಣಚುಗಲ್ಲು ಸೂಕ್ಷ್ಮ ಕೆತ್ತನೆಗೆ ತಕ್ಕ ಮಾಧ್ಯಮವಾಗಿರಲಿಲ್ಲ. ಇದರಿಂದಾಗಿ ವಿಜಯನಗರ ಅರಸರ ದೇವಾಲಯಗಳಲ್ಲಿ ಹೊಯ್ಸಳ ಶಿಲ್ಪಗಳಷ್ಟು ನಯ-ನಾಜೂಕಿನ ಶಿಲ್ಪಗಳು ಮೂಡಿ ಬರಲಿಲ್ಲ. ಅಂದಮಾತ್ರಕ್ಕೆ ಶಿಲ್ಪಕಲೆ ಬಡವಾಯಿತು ಎಂಬರ್ಥವಲ್ಲ. ಅಧಿಷ್ಠಾನದ ಪಟ್ಟಿಕೆಗಳಲ್ಲಿ ಚಿಕಣಿ ಶಿಲ್ಪಗಳ ಸಾಲುಗಳನ್ನು ಕೆತ್ತಲಾಗಿದೆ. ಇವುಗಳಲ್ಲಿ ಆನೆ, ಕುದುರೆ, ಪಕ್ಷಿ ಮತ್ತು ರಾಮಾಯಣ, ಮಹಾಭಾರತ, ಪೌರಾಣಿಕ ಕಥಾ ಪ್ರಸಂಗಗಳನ್ನು ಕಂಡರಿಸಿದ್ದಾರೆ. ಹಂಪೆಯ ವಿಜಯವಿಠಲ ಮಂದಿರ ಅಚ್ಯುತರಾಯನ ಗುಡಿ ಮತ್ತು ಬಾಗೇಪಲ್ಲಿಯ ನರಸಿಂಹ ಗುಡಿಯನ್ನು ಈ ನಿಟ್ಟಿನಲ್ಲಿ ಗಮನಿಸಬಹುದು. ಮಹಾನವಮಿ ದಿಬ್ಬದ ಗೋಡೆಗುಂಟ ಕೆತ್ತನೆಗೊಂಡ ಉಬ್ಬುಶಿಲ್ಪಗಳು ಪ್ರಾಣಿ ಪಕ್ಷಿಗಳನ್ನು ನರ್ತಕರ ವಿವಿಧ ನಾಟ್ಯ ಭಂಗಿಗಳನ್ನು ಪ್ರದರ್ಶಿಸುತ್ತವೆ. ಶೃಂಗೇರಿಯ ವಿದ್ಯಾಶಂಕರ ಗುಡಿಯ ಭಿತ್ತಿ ಶಿಲ್ಪಗಳೂ ಗಮನಾರ್ಹ.

ವಿಜಯನಗರ ಶಿಲ್ಪಕಲೆಯ ಚೆಲುವು ಮತ್ತು ಸಂಕೀರ್ಣತೆ ಮಡುವುಗಟ್ಟಿದ್ದು ಕಂಬಗಳಲ್ಲಿ. ಭಿತ್ತಿಶಿಲ್ಪಗಳು ಕಡಿಮೆಯಾದರೆ ಸ್ತಂಭ ಶಿಲ್ಪಗಳು ಹೆಚ್ಚಿದವು. ವಿಜಯನಗರ ಕಾಲದ ಕಂಬಗಳ ವಿನ್ಯಾಸವು ವೈಶಿಷ್ಟ್ಯಪೂರ್ಣವಾದದ್ದು. ವಿವಿಧ ಪ್ರಾಣಿಗಳು ಇಲ್ಲಿ ಚಿತ್ರಿತವಾಗಿವೆ. ಕಂಬಕ್ಕೆ ಸೇರಿದಂತೆ ಕುದುರೆಯಾಳಿಯ ಬೃಹತ್ ಶಿಲ್ಪವೊಂದು ಹಿಂಗಾಲಿನ ಮೇಲೆ ನಿಂತು ಜಿಗಿಯುತ್ತಿರುವಂತೆ ಕೆತ್ತಲಾಗಿದೆ. ಮಧುರೆ, ಲೇಪಾಕ್ಷಿ, ಶೃಂಗೇರಿ ಮಂದಿರಗಳಲ್ಲಿ ಈ ತೆರನಾದ ಶಿಲ್ಪಗಳನ್ನು ನೋಡಬಹುದು.

ಹೊಯ್ಸಳರ ಶಿಲ್ಪಕಲೆ ಸೂಕ್ಷ್ಮತೆಯತ್ತ ವಾಲಿದ್ದರೆ, ವಿಜಯನಗರ ಕಲೆ ಭವ್ಯತೆಯತ್ತ ಹೊರಳಿತು. ಬೃಹದಾಕಾರದ ವಿಗ್ರಹಗಳು ವಿಜಯನಗರ ಶಿಲ್ಪಶೈಲಿಯ ಪ್ರಧಾನ ಅಂಶ. ಹಂಪೆಯ ಉಗ್ರನರಸಿಂಹ, ಕಡಲೆಕಾಳು ಗಣಪತಿ, ಸಾಸಿವೆಕಾಳು ಗಣಪತಿ, ವೀರಭದ್ರ ಮೊದಲಾದ ಮೂಲವಿಗ್ರಹಗಳನ್ನು ಗಟ್ಟಿಯಾದ ಬೆಣಚುಕಲ್ಲಿನಲ್ಲಿ ಕಟೆದಿದ್ದಾರೆ. ನೋಡುಗನ ಮನವನ್ನು ಉದಾತ್ತೀಕರಿಸುವ ಭವ್ಯತೆ ಈ ಶಿಲ್ಪಗಳದ್ದು. ಮಂದಿರಗಳ ಪ್ರಾಕಾರದ ವೈಶಾಲ್ಯವೂ ಇದಕ್ಕೆ ಪೂರಕ. ವಿಜಯ ವಿಠಲ ಮಂದಿರದ ಮಂಟಪದ ಪಕ್ಕದಲ್ಲಿರುವ ಕಲ್ಲಿನ ರಥವು ಒಂದು ಅಪೂರ್ವ ಶಿಲ್ಪ. ಈ ರಥದ ಗಾಲಿಗಳು ಮರದ ಕೀಲಿನ ಗಾಲಿಗಳಂತೆ ತಿರುಗುವಂತಿವೆ. ರಥವು ಪ್ರಮಾಣ ಬದ್ಧವಾಗಿದೆ, ಅಂತೆಯೇ ಚಿತ್ತಾಕರ್ಷಕವಾಗಿದೆ.

ವಿಜಯನಗರ ಅರಸರ ಪೋಷಣೆಯಲ್ಲಿ ಶೈವಮೂರ್ತಿಗಳು ನಿರ್ಮಾಣಗೊಂಡರೂ ಹೆಚ್ಚಿನ ಒಲವು ವೈಷ್ಣವ ಶಿಲ್ಪಗಳತ್ತ ಇದ್ದದ್ದು ಸುಸ್ಪಷ್ಟ. ಈ ದಿಸೆಯಲ್ಲಿ ಹಂಪೆಯ ಉಗ್ರನರಸಿಂಹ ತಟ್ಟನೆ ಕಣ್ಮುಂದೆ ನಿಲ್ಲುತ್ತಾನೆ. ಶೈವ ಸಂಪ್ರದಾಯಕ್ಕೆ ಸೇರಿದ ಗಣಪತಿ, ಶಿವಲಿಂಗಗಳೂ ಈ ಶಿಲ್ಪಿಗಳಿಂದ ಸೃಷ್ಟಿಗೊಂಡವು.

ಆಳರಸರ ಪ್ರತಿಕೃತಿಯ ಶಿಲ್ಪ ಕೆತ್ತನೆಯು ವಿಜಯನಗರ ಕಲೆಯ ಮಹತ್ವದ ಬೆಳವಣಿಗೆಯನ್ನು ಸೂಚಿಸುತ್ತದೆ ಹಂಪೆಯ ಕೃಷ್ಣದೇವಾಲಯದ ಗೋಪುರದಲ್ಲಿ ಕೃಷ್ಣದೇವರಾಯನು ದಂಡಯಾತ್ರೆ ಕೈಕೊಂಡ ಪ್ರಸಂಗವನ್ನು ಚಿತ್ರಿಸಲಾಗಿದೆ. ಈ ರಾಜರ ಶಿಲ್ಪಗಳು ವಸ್ತ್ರಾಭರಣಗಳಿಂದ ಅಲಂಕೃತಗೊಂಡು ರಾಜಠೀವಿಯಲ್ಲಿ ಬಿಂಬಿತವಾಗಿವೆ. ಇಲ್ಲಿನ ಉಬ್ಬುಶಿಲ್ಪಗಳಲ್ಲಿ ಅಂದಿನ ಸಮಕಾಲೀನ ಜೀವನವನ್ನು ಕಾಣಬಹುದು. ಸಂಗೀತ, ನೃತ್ಯನಿರತ ಕಲಾವಿದರು, ಕುಸ್ತಿ, ಬೇಟೆ ಆಡುವ ಯೋಧರು ಕಲಾಭಿವ್ಯಕ್ತಿಗೆ ವಸ್ತುವಾಗಿದ್ದಾರೆ. ಹಿಂದಿನಿಂದಲೂ ಬಂದ ಈ ಶಿಲ್ಪ ಪರಂಪರೆಯನ್ನು ವಿಜಯನಗರ ಕಲಾವಿದರು ಮುಂದುವರೆಸಿದರು. ಅವರು ಹಿಂದಿನ ಕಲಾ ಸಂಪ್ರದಾಯವನ್ನು ಉಳಿಸಿ ಬೆಳೆಸಿದ ಬಗೆ, ಬೆಣಚು ಕಲ್ಲನ್ನು ದುಡಿಸಿಕೊಂಡ ರೀತಿ, ಸರಳತೆ ಸೌಂದರ್ಯಗಳನ್ನು ಶಿಲ್ಪಗಳಲ್ಲಿ ಬೆಸೆದ ಶೈಲಿ ಗಮನಾರ್ಹವಾಗಿವೆ. ಇವರ ನಂತರ ಕಾರಣಾಂತರಗಳಿಂದ ಈ ಶಿಲ್ಪ ಪರಂಪರೆಯು ನಿಂತ ನೀರಾಯಿತು.

ವಿಜಯನಗರ ಸಾಮ್ರಾಜ್ಯದ ಪತನವಾದ ಬಳಿಕ ಪಾಳೆಯಗಾರರು, ನಾಯಕರು ತಲೆ ಎತ್ತಿದರು. ತಮ್ಮ ಅಸ್ತಿತ್ವದ ಹೋರಾಟದಲ್ಲಿ ಅವರ ಜೀವನ ಕಳೆಯಿತು. ಶಿಲ್ಪಕಲೆ ಕಳೆಗುಂದಿತು. ಕೆಳದಿ ಅರಸು ಮನೆತನದವರ ಕಾಲದಲ್ಲಿ ವಾಸ್ತುಶಿಲ್ಪಕ್ಕೆ ಪ್ರೋತ್ಸಾಹ

ದೊರೆಯಿತಾದರೂ ಹೇಳಿಕೊಳ್ಳುವ ಶಿಲ್ಪಶ್ರೀ ಕಾಣಬರಲಿಲ್ಲ. ಮೈಸೂರಿನ ಒಡೆಯರು ಹಲವಾರು ದೇವಾಲಯಗಳನ್ನು ಕಟ್ಟಿಸಿದರೂ ಶಿಲ್ಪಕಲೆ ಇಳಿಮುಖವಾಯಿತು, ಆದರೆ ನಶಿಸಿಹೋಗಲಿಲ್ಲ.

ಕರ್ನಾಟಕದ ಪ್ರಾಚೀನ ಶಿಲ್ಪ ಪರಂಪರೆಯನ್ನು ಈಗಲೂ ಕಾಪಾಡುತ್ತಿರುವ ಶಿಲ್ಪಿಗಳಿದ್ದಾರೆ. ಶಿವಾರಪಟ್ಟಣದಲ್ಲಿ ಇಂತಹ ಶಿಲ್ಪಿಗಳ ಸುಮಾರು ಐವತ್ತು ಕುಟುಂಬಗಳೇ ಇವೆ. ಚಾಲುಕ್ಯ, ಹೊಯ್ಸಳ ಶೈಲಿಗಳ ಶಿಲ್ಪಗಳನ್ನು ನಿರ್ಮಿಸುವುದು ಮಾತ್ರವಲ್ಲದೆ ಇವರು ಶಾಸ್ತ್ರೋಕ್ತವಾಗಿ ಅವನ್ನು ಪ್ರತಿಷ್ಠಾಪಿಸಿ ಕೊಡುತ್ತಾರೆ. ಇವರಂತೆಯೇ ನಾಗಮಂಗಲ, ದೇವನಹಳ್ಳಿ, ಮೈಸೂರು, ಗದಗ, ಬಾಗಲಕೋಟೆಗಳಲ್ಲಿ ಇಂದಿಗೂ ಪಾರಂಪರಿಕ ಶಿಲ್ಪಕಲೆಯನ್ನು ತಮ್ಮ ವೃತ್ತಿಯನ್ನಾಗಿ ಸ್ವೀಕರಿಸಿದ ರೂವಾರಿಗಳ ಸಮೂಹವೇ ಇದೆ.

ಲೋಹಶಿಲ್ಪಗಳು

ಭಾರತೀಯ ಲೋಹಶಿಲ್ಪಕಲೆಯ ಬೇರನ್ನು ಹುಡುಕುತ್ತ ಹೊರಟರೆ ಹರಪ್ಪಾ ಸಂಸ್ಕೃತಿಯ ಕಾಲಕ್ಕೆ ಹೋಗಬೇಕಾಗುತ್ತದೆ. ಈ ದಿಸೆಯಲ್ಲಿ ಮೊಹೆಂಜೋದಾರೊದ ನರ್ತಕಿಯ ಕಂಚಿನ ಶಿಲ್ಪವು ಬಲು ಪ್ರಸಿದ್ಧವಾದುದು. ಲೋಹಗಳಲ್ಲಿ ಕಂಚು ಮಾತ್ರವಲ್ಲ ಚಿನ್ನ, ಬೆಳ್ಳಿ ತಾಮ್ರ ಹಿತ್ತಾಳೆ ಮೊದಲಾದವು ಪ್ರತಿಮೆಗಳ ರಚನೆಗೆ ಮಾಧ್ಯಮಗಳಾಗಿವೆ. ವರಾಹ ಮಿಹಿರನ ಬೃಹತ್ ಸಂಹಿತೆಯು ಬಗೆಬಗೆಯ ಲೋಹಶಿಲ್ಪಗಳನ್ನು ಪ್ರಸ್ತಾಪಿಸುತ್ತದೆ. ದೀರ್ಘಕಾಲದ ಬಾಳಿಕೆಗೆಂದೇ ಲೋಹದ ಪ್ರತಿಮೆಗಳು ರಚಿತವಾದವೆಂದು ಬೇರೆ ಹೇಳಬೇಕಿಲ್ಲ. ಮೂಲ ಆಕೃತಿಯನ್ನು ಮೇಣದಿಂದ ರೂಪಿಸಿ, ನಂತರ ಎರಕವನ್ನು ಲೋಹದಲ್ಲಿ ಮಾಡುವುದರಿಂದ ಸೂಕ್ಷ್ಮವಾದ ಅಂಗರಚನೆ ಸಾಧ್ಯವಾಯಿತು. ಇದರಿಂದಾಗಿ ಶಿಲಾಮೂರ್ತಿಗಳಲ್ಲಿ ಸಾಧ್ಯವಾಗದ ಚೆಲುವನ್ನು ಲೋಹಶಿಲ್ಪಗಳಲ್ಲಿ ತುಂಬಲು ಸಾಧ್ಯವಾಯಿತು. ದೇವಾಲಯದ ಮೂಲದೇವನ ವಿಗ್ರಹವು ಕಲ್ಲಿನದಾಗಿದ್ದು ಸ್ಥಿರಮೂರ್ತಿಯಾಗಿದ್ದಿತು. ಅದನ್ನು ಉತ್ಸವದ ಮೆರವಣಿಗೆಯಲ್ಲಿ ಒಯ್ಯಲು ಸಾಧ್ಯವಿಲ್ಲ. ಆ ಕಾರಣ ಆ ದೇವರ ಪುಟ್ಟ ಪುತ್ಥಳಿಯನ್ನು ಲೋಹದಲ್ಲಿ ನಿರ್ಮಿಸಿ ಅದನ್ನು ಧಾರ್ಮಿಕ ಕಾರ್ಯಗಳಿಗೆ ಬಳಸತೊಡಗಿದರು.

ಕರ್ನಾಟಕದ ಹಳ್ಳೂರ, ತೆಕ್ಕಲುಕೋಟೆಗಳಲ್ಲಿನ ಉತ್ಖನನಗಳಲ್ಲಿ ಲೋಹದ ಮೂರ್ತಿಗಳು ದೊರೆತಿವೆ. ಪಿಕ್ಲಿಹಾಳ, ಮಸ್ಕಿ, ಬ್ರಹ್ಮಗಿರಿ, ಸಂಡೂರು, ಹಟ್ಟಿ, ಕೋಲಾರ ಮೊದಲಾದ ಕಡೆಗಳಲ್ಲಿ ಲೋಹದ ಕುಲುಮೆಗಳಿದ್ದುದು ತಿಳಿದುಬರುತ್ತದೆ. ಕ್ರಿ.ಶ. ಮೂರನೆಯ ಶತಮಾನದ ಶಾತವಾಹನರ ಲೋಹ ಪ್ರತಿಮೆಯೊಂದು ಇಂದು ಕೊಲ್ಹಾಪುರದ ವಸ್ತು ಸಂಗ್ರಹಾಲಯದಲ್ಲಿದೆ. ಆನೆಯ ಮೇಲೆ ನಾಲ್ಕು ಜನ ಯೋಧರು ಸವಾರಿ ಮಾಡುತ್ತಿರುವಂತೆ ಈ ಮೂರ್ತಿಯನ್ನು ರಚಿಸಿದ್ದಾರೆ. ಮುಂಬೈಯ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂನಲ್ಲಿನ ಆನೆ ಸವಾರ, ಮತ್ತು ನೃತ್ಯ, ಸಂಗೀತದಲ್ಲಿ ತಲ್ಲೀನರಾದ ಸ್ತ್ರೀ-ಪುರುಷರ ಲೋಹ ಮೂರ್ತಿಗಳು ಚಾಲುಕ್ಯರ ಕೊಡುಗೆಗಳು. ನಂದಿಯ ಭೋಗ ನಂದೀಶ್ವರ ದೇವಾಲಯದಲ್ಲಿ ದೊರೆತ ಸು.೯ನೆಯ ಶತಮಾನದ ಸೋಮಸ್ಕಂದ ಪ್ರತಿಮೆ ಇನ್ನೊಂದು ಗಮನಾರ್ಹ ಶಿಲ್ಪ. ಅದು ಈಗ ಬೆಂಗಳೂರಿನ ವಸ್ತುಸಂಗ್ರಹಾಲಯದಲ್ಲಿದೆ.

ದೆಹಲಿಯ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿನ ಅಂಬಿಕೆಯ ಹಿತ್ತಾಳೆಯ ಪುತ್ಥಳಿ ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದುದು. ಇದರಲ್ಲಿ ಜೈನ ಸಂಪ್ರದಾಯದನ್ವಯ ದೇವಿಯು

ಲಲಿತಾಸನದಲ್ಲಿ ಸಿಂಹದ ಮೇಲೆ ಆಸೀನಳಾಗಿದ್ದಾಳೆ. ಪ್ರಭಾವಳಿಯ ಮೇಲ್ಭಾಗದಲ್ಲಿ ನೇಮಿನಾಥ ತೀರ್ಥಂಕರನ ಮೂರ್ತಿ ಇದೆ. ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂನ ಜೈನ ಪ್ರತಿಮೆ ಬಾಹುಬಲಿಯದು. ಇಲ್ಲಿಯೇ ಇರುವ ಇನ್ನೊಂದು ಜಿನಶಿಲ್ಪ ವೃಷಭನಾಥನದು. ಇವೆರಡೂ ಗಂಗರಸರ ಕೊಡುಗೆಗಳು, ಜೈನ ಸಂಪ್ರದಾಯಕ್ಕೆ ಸಂಬಂಧಿಸಿದ ಉತ್ಕೃಷ್ಟವಾದ ಬಾಹುಬಲಿ ಕಂಚಿನ ಶಿಲ್ಪವು(೬೧ ಸೆಂ.ಮೀ.) ಶ್ರವಣಬೆಳಗೊಳದಲ್ಲಿದೆ. ಇದನ್ನು ಮಾಡಿಸಿದವಳು ಗಂಗದೊರೆ ಎರಡನೆಯ ಮಾರಸಿಂಹನ ಅಕ್ಕ ಸೋಮಿದೇವಿ.

ಗುಲ್ಬರ್ಗಾ ಜಿಲ್ಲೆಯ ಮಳಖೇಡ ಬಸದಿಯಲ್ಲಿರುವ ಪಂಚಪರಮೇಷ್ಠಿ ಶಿಲ್ಪಗಳು ಹಾಗೂ ಮುಂಬೈಯ ವಸ್ತುಸಂಗ್ರಹಾಲಯದಲ್ಲಿನ ಚಾಮರ ಸುಂದರಿ ಪ್ರತಿಮೆ ಕಲ್ಯಾಣ ಚಾಲುಕ್ಯರ ಕಲಾ ಕೊಡುಗೆಗಳು. ಮಂಗಳೂರಿನ ಹತ್ತಿರದ ಕದರಿ ಶ್ರೀ ಮಂಜುನಾಥ ದೇವಸ್ಥಾನದ ಲೋಕೇಶ್ವರ (೧೨೦ ಸೆಂ.ಮೀ.) ಎಂಬ ಬೌದ್ಧ ಸಂಪ್ರದಾಯದ ಪಂಚಲೋಹವು ಅಪೂರ್ವವಾದುದು. ಇದರ ಕರ್ತೃ ಆಳುಪ ದೊರೆ ಕುಂದವರ್ಮನೆಂಬುದು ಪ್ರತಿಮೆಯ ಶಾಸನದಿಂದ ತಿಳಿದುಬರುತ್ತದೆ. ಇದೊಂದು ಮೌಲಿಕ ಕಲಾಕೃತಿ.

ಕೋಲಾರ ಜಿಲ್ಲೆಯ ನರಸ ಮಂಗಲದಲ್ಲಿ ಲಭ್ಯವಾದ ನಟರಾಜನ ಕಂಚಿನ ಪ್ರತಿಮೆ(೧೩೩ ಸೆಂ.ಮೀ.)ಯು ಚೋಳರ ಶಿಲ್ಪವಾಗಿದೆ. ಶಿವನು ಅಪಸ್ಮಾರನ ಮೇಲೆ ನರ್ತಿಸುತ್ತಿರುವಂತೆ ರಚಿಸಲಾಗಿದೆ. ಎರಡು ಕೈಗಳಲ್ಲಿ ಅಗ್ನಿ, ಡಮರುಗಳನ್ನು ಹಿಡಿದಂತೆ, ಉಳಿದೆರಡು ಕೈಗಳು ಅಭಯ, ಲಂಬ ಹಸ್ತಗಳ ಮುದ್ರಿಕೆಯಲ್ಲಿರುವಂತೆ ಮೂಡಿ ಬಂದಿವೆ. ಕೂಡಲೂರಿನ ನಟರಾಜ, ಪಾರ್ವತಿಯರ ಕಂಚಿನ ಮೂರ್ತಿಗಳೂ ಈ ಪರಂಪರೆಗೆ ಸೇರಿದವುಗಳೇ, ಇದೇ ಚೋಳ ಶಿಲ್ಪಶೈಲಿಗೆ ಸೇರಿದ ಶೈವ, ವೈಷ್ಣವ ಮೂರ್ತಿಗಳು ನರಸಮಂಗಲದ ಹತ್ತಿರದ ಬೆಳ್ಳೂರು, ನಂಜನಗೂಡುಗಳಲ್ಲಿ ದೊರೆತಿವೆ.

ಹೊಯ್ಸಳರ ಕಾಲದ ಲೋಹಶಿಲ್ಪದ ಉತ್ತಮ ಕಲಾ ಕಾಣಿಕೆಗಳೆಂದರೆ ಶಿವಗಂಗೆಯ ಶಿವನ ಪ್ರತಿಮೆ, ಕಿಕ್ಕೇರಿಯ ಬ್ರಹ್ಮೇಶ್ವರ ಗುಡಿಯ ಮೂರ್ತಿ, ಬೇಲೂರಿನ ಚನ್ನಕೇಶವ ದೇವಾಲಯದಲ್ಲಿನ ವಿಷ್ಣುವರ್ಧನನ ಕಂಚಿನ ಪುತ್ಥಳಿಗಳು.

ವಿಜಯನಗರ ಅರಸರ ಕಾಲದಲ್ಲಿ ಶಿವ, ವಿಷ್ಣು ದೇವತೆಗಳ ಶಿಲ್ಪಗಳು ಹೇರಳವಾಗಿ ರಚಿಸಲ್ಪಟ್ಟವು. ಮಾನವ ಶಿಲ್ಪಗಳೂ ನಿರ್ಮಿತಗೊಂಡಿದ್ದು ಈ ಕಾಲದ ಒಂದು ವಿಶೇಷ. ತಿರುಪತಿ ಬೆಟ್ಟದಲ್ಲಿನ ಕೃಷ್ಣದೇವರಾಯ ಹಾಗೂ ಆತನ ಅರಸಿಯರಾದ ತಿರುಮಲಾಂಬ ಮತ್ತು ಚೆನ್ನಾದೇವಿ ಅವರ ಲೋಹದ ಪ್ರತಿಮೆಗಳನ್ನು ಇಲ್ಲಿ ಹೆಸರಿಸಬಹುದು.

ಕರ್ನಾಟಕದ ಲೋಹಶಿಲ್ಪಗಳ ಅಧ್ಯಯನದಲ್ಲಿ ವಿಜಯನಗರ ಕಾಲದ್ದು ಸಿಂಹಪಾಲು. ನೊಣವಿನಕೆರೆಯ ಚತುರ್ಬಾಹು ಜನಾರ್ಧನನ ಲೋಹಶಿಲ್ಪವು ಶಂಖ, ಚಕ್ರ, ಗದೆ ಮತ್ತು ವಸ್ತ್ರಾಭರಣಗಳಿಂದ ಅಲಂಕೃತವಾಗಿದೆ. ಕಳಲೆಯ ಲಕ್ಷ್ಮೀಕಾಂತ ಗುಡಿಯ ನಂಬಿನಾರಾಯಣನ ವಿಗ್ರಹವು ಇನ್ನೊಂದು ಗಮನಾರ್ಹ ಕಲಾಕೃತಿ. ಈ ಶಿಲ್ಪವು ಮಕರ ತೋರಣ, ಕೀರ್ತಿಮುಖಗಳಿಂದ ಶೋಭಿತವಾಗಿದೆ. ಪಕ್ಕದಲ್ಲಿನ ದೇವಿಯರು ವಸ್ತ್ರಾಭರಣ ಭೂಷಿತೆಯಾಗಿದ್ದಾರೆ. ಶಿವಗಂಗೆಯ ಗಂಗಾಧರೇಶ್ವರ ಗುಡಿಯ ತಾಂಡವೇಶ್ವರ ಮೂರ್ತಿಯು ಇನ್ನೊಂದು ಗಮನಾರ್ಹ ಶಿಲ್ಪ. ದಶಭುಜನಾದ ಶಿವನು ಅಂಧಕಾಸುರನ ಮೇಲೆ ಪರಶು, ತ್ರಿಶೂಲ, ಡಮರು, ಅಗ್ನಿ, ಗಂಟೆ, ಪದ್ಮ, ವೀಣೆ, ಕತ್ತಿಗಳನ್ನು

ಹಿಡಿದುಕೊಂಡು ನರ್ತಿಸುತ್ತಿರುವಂತೆ ನಿರ್ಮಿಸಲಾಗಿದೆ. ತಲೆಯ ಸುತ್ತ ಅಗ್ನಿಯ ಪ್ರಭಾವಲಯವಿದೆ. ಶ್ರೀಶೈಲದ ಮಲ್ಲಿಕಾರ್ಜುನನ ಗುಡಿಯಲ್ಲಿನ ನಟರಾಜನ ಲೋಹದ ಮೂರ್ತಿ ಕೂಡ ಇದೇ ಕಾಲದ್ದು. ಹಂಪೆಯ ವಸ್ತು ಸಂಗ್ರಹಾಲಯದಲ್ಲಿರುವ ಲಕ್ಷ್ಮಿ, ಲಕ್ಷ್ಮಿನರಸಿಂಹ ಪಾರ್ವತಿ ಪ್ರತಿಮೆಗಳು, ಮೂಡಬಿದ್ರೆಯಲ್ಲಿ ದೊರೆತ ಪ್ರಭಾವಳಿಯುಕ್ತ ಗಣೇಶ ಶಿಲ್ಪಗಳು ವಿಜಯನಗರ ಕಾಲದ ಇತರ ಲೋಹಶಿಲ್ಪಗಳು.

ವಿಜಯನಗರದ ಅರಸರು ತಮ್ಮ ನಾಣ್ಯಗಳ ಮೇಲೆ ದೇವತಾ ಮೂರ್ತಿಗಳನ್ನು ಬಿಂಬಿಸಿದುದು ಇತಿಹಾಸ ಅಧ್ಯಯನಕ್ಕೆ ನೆರವಾಗಿದೆ. ಎರಡನೆಯ ಹರಿಹರನ ನಾಣ್ಯದ ಮೇಲೆ ತ್ರಿಶೂಲಧಾರಿ ಉಮಾಮಹೇಶ್ವರನ ಉಬ್ಬುಶಿಲ್ಪ ಕಂಡು ಬರುತ್ತದೆ. ಒಂದನೆಯ ದೇವರಾಯನ ನಾಣ್ಯದ ಮೇಲೆ ಪರಶುಧರ ಉಮಾ ಮಹೇಶ್ವರ ಚಿತ್ರಿತನಾಗಿದ್ದಾನೆ. ಎರಡನೆಯ ದೇವರಾಯನ ನಾಣ್ಯದ ಮೇಲೆ ಆನೆಯ ಕೆತ್ತನೆ ಇದೆ. ಕೃಷ್ಣದೇವರಾಯನ ನಾಣ್ಯಗಳಲ್ಲಿ ಬಾಲಕೃಷ್ಣನ ಮೂರ್ತಿ ಇವೆ. ಅಚ್ಯುತರಾಯನ ನಾಣ್ಯಗಳಲ್ಲಿ ನಿಂತ ಗರುಡನ ಇಲ್ಲವೆ ಹಾರಾಡುವ ಗಂಢಬೇರುಂಡ ಶಿಲ್ಪವಿರುವುದು ಕಾಣಬರುತ್ತದೆ. ಸದಾಶಿವನ ನಾಣ್ಯಗಳ ಮೇಲೆ ಲಕ್ಷ್ಮೀನಾರಾಯಣ ರೂಪಿತನಾಗಿದ್ದಾನೆ.

ವಿಜಯನಗರ ಅರಸರ ನಂತರ ಲೋಹಶಿಲ್ಪಕಲೆ ಮುಂದುವರೆಯಿತಾದರೂ ಕಲಾತ್ಮಕ ಗುಣದಿಂದ ಮೌಲಿಕವಾಗಲಿಲ್ಲ. ಇಂದು ಲೋಹದ ಮೂರ್ತಿಗಳನ್ನು ಎರಕ ಹೊಯ್ಯುವ ಕೆಲವು ಕೇಂದ್ರಗಳಿದ್ದು ಅವು ಪ್ರಾಚೀನ ಲೋಹಶಿಲ್ಪ ಪರಂಪರೆಯನ್ನು ಉಳಿಸಿಕೊಂಡಿರುವುದು ಸ್ವಾಗತಾರ್ಹವಾಗಿದೆ.

ಕಾಷ್ಠ ಶಿಲ್ಪಗಳು

ಕಟ್ಟಿಗೆ ಮಾನವ ಬದುಕಿನ ಭಾಗವೇ ಆಗಿದೆ. ಅದು ಹಲವು ವಿಧಗಳಲ್ಲಿ ಹಲವು ಉದ್ದೇಶಗಳಿಗಾಗಿ ಬಳಸಲ್ಪಟ್ಟಿದೆ. ಜನನದಿಂದ ಮೊದಲ್ಗೊಂಡು ಮರಣದವರೆಗೆ ಅದು ನಮಗೆ ಪ್ರಯೋಜನಕಾರಿ. ತೊಟ್ಟಿಲು ಕಟ್ಟಿಗೆಯದು! ಶವದ ಪೆಟ್ಟಿಗೆ ಕೂಡ!

ಕಟ್ಟಿಗೆಯ ಕಲಾತ್ಮಕ ಬಳಕೆಯು ಸಿಂಧೂ ಸಂಸ್ಕೃತಿಯಷ್ಟು ಪ್ರಾಚೀನ. ಆಗ ಮರದ ಕಂಬ, ತೊಲೆಗಳಿಂದ ಕಟ್ಟಡ ರಚನೆ ನಡೆಯುತ್ತಿತ್ತು. ಋಗ್ವೇದ, ಬೃಹತ್ ಸಂಹಿತಾ, ವಿಷ್ಣು ಧರ್ಮೋತ್ತರಗಳಲ್ಲಿ ಬಡಗಿ ಕಲೆಯ ಪ್ರಸ್ತಾಪವಿದೆ. ಮೌರ್ಯರ ಅರಮನೆಗಳು ಕಾಷ್ಠನಿರ್ಮಿತವಾಗಿದ್ದವು. ಮಹಾರಾಷ್ಟ್ರದ ಕಾರ್ಲೆಯ ಅರ್ಧವೃತ್ತಾಕಾರದ ಚೈತ್ಯಾಲಯವು ಗುಡಿಸಲಿನ ರಚನೆಯನ್ನು ಹೊಂದಿದೆ. ಕಲ್ಲಿನಲ್ಲಿ ರಥವನ್ನು ನಿರ್ಮಿಸಲು ಪ್ರೇರಣೆ ಆ ಮೊದಲಿನ ಕಾಷ್ಠರಥವೇ.

ಭಾರತೀಯ ಶಿಲ್ಪಪರಂಪರೆಯಲ್ಲಿ ಮರಗಳಿಂದ ತಯಾರಾದ ರಥಗಳ ಪಾತ್ರ ಬಲು ದೊಡ್ಡದು, ದೇವಾಲಯಕ್ಕಿರುವ ಸ್ಥಾನವೇ ರಥಕ್ಕಿದೆ. ದೇವಾಲಯದಲ್ಲಿನದು ಸ್ಥಿರಮೂರ್ತಿ; ರಥದಲ್ಲಿಯದು ಚರಶಿಲ್ಪ. ಮಾನಸಾರ ಗ್ರಂಥವು ರಥಗಳ ಬಗ್ಗೆ ಸುದೀರ್ಘ ವಿವರಣೆ ನೀಡುತ್ತದೆ. ಕಾಷ್ಠರಥವು ವಿಶ್ವದರ್ಶನವನ್ನೇ ಮಾಡಿಸುತ್ತದೆ. ಸಿಂಹ ಆನೆ, ಮೊದಲಾದ ಪ್ರಾಣಿಶಿಲ್ಪಗಳನ್ನು ರಾಕ್ಷಸ, ಯಕ್ಷ, ಕಿನ್ನರ ನಾಗರಂತಹ ಅತಿಮಾನವ ಭವ್ಯ ಮೂರ್ತಿಗಳನ್ನು ತೋರಣ, ಹೂಬಳ್ಳಿಗಳು ಮತ್ತು ಜ್ಯಾಮಿತೀಯ ನಕ್ಷೆಗಳ ವೈವಿಧ್ಯವನ್ನು ಅಲ್ಲಿ ಕಾಣಬಹುದು. ರಥದ ಕೆಳಭಾಗದ ಪಟ್ಟಿಕೆಗಳಲ್ಲಿ ಪ್ರಧಾನ ದೇವತೆಗಳಾದ

ಬ್ರಹ್ಮ, ವಿಷ್ಣು, ಶಿವ, ದುರ್ಗೆಯರು ವಾಹನಗಳೊಂದಿಗೆ ಚಿತ್ರಿತರಾಗಿರುತ್ತಾರೆ ಸಂಗೀತಗಾರರ ಮೇಳಗಳು ರಥಕ್ಕೆ ಬೆಡಗನ್ನು ಬೆಸೆದಿರುತ್ತವೆ ಕರ್ನಾಟಕದ ಬಹುತೇಕ ಗ್ರಾಮಗಳಲ್ಲಿ ರಥೋತ್ಸವವು ವಾರ್ಷಿಕ ಧಾರ್ಮಿಕ ಉತ್ಸವವಾಗಿರುತ್ತದೆ.

ಕಟ್ಟಿಗೆ ಬೇಗನೆ ನಾಶವಾಗುವ ವಸ್ತು, ಅಂತೆಯೇ ಪ್ರಾಚೀನ ಕಾಷ್ಠಶಿಲ್ಪಗಳು ಈಗ ಅಲಭ್ಯ. ಶಿಲ್ಪರಚನೆಗೆ ಅದು ಸುಲಭ ಮಾಧ್ಯಮ ಮೆದುವಾದ ಕಾರಣ ಕಲಾವಿದನ ಹಸ್ತಕೌಶಲ್ಯದ ಪ್ರದರ್ಶನಕ್ಕೆ ಸಹಾಯಕಾರಿ. ಶ್ರೀಗಂಧವು ಕಟ್ಟಿಗೆಗಳ ರಾಣಿ. ಮೈಸೂರು ಪ್ರದೇಶದಲ್ಲಿ ಶ್ರೀಗಂಧ ಮತ್ತು ಸಾಗವಾನಿ ಮರಗಳು ಹೆಚ್ಚಾಗಿ ಬೆಳೆಯುವುದರಿಂದ ಸ್ಥಳೀಯ ಕಲಾಕಾರರಿಗೆ ಉತ್ತಮ ಗುಣಮಟ್ಟದ ಕಟ್ಟಿಗೆ ಲಭ್ಯವಾಗುತ್ತದೆ. ಸೊರಬ, ಸಾಗರ ಮೊದಲಾದ ಊರುಗಳ ಗುಡಿಗಾರರು ಶ್ರೀಗಂಧದ ಮರದಲ್ಲಿ ವಿವಿಧ ದೇವತಾ ವಿಗ್ರಹಗಳನ್ನು ಕೆತ್ತುವುದುಂಟು. ಶ್ರೀಗಂಧ ಶಿಲ್ಪಗಳು ಹೆಚ್ಚು ಪೂಜನೀಯ.

ಹಲಗೆಗಳ ಮೇಲೆ ಚಿತ್ರಗಳನ್ನು ಕೆತ್ತಿ ಬಾಗಿಲುವಾಡ, ಅಲಂಕಾರ ಪೆಟ್ಟಿಗೆ, ಪೀಠೋಪಕರಣಗಳನ್ನು ತಯಾರಿಸಲಾಗುತ್ತದೆ. ಇದು ಮಟ್ಟ ಕೆಲಸ. ದುಂಡು ಶಿಲ್ಪಗಳೂ ಕಾಷ್ಠದಲ್ಲಿ ನಿರ್ಮಿತವಾಗುತ್ತವೆ. ಈ ಬಗೆಯ ಶಿಲ್ಪ ಪರಂಪರೆ ಇಂದಿಗೂ ಸಜೀವವಾಗಿದೆ. ಗ್ರಾಮದೇವತೆಗಳು ಸಾಮಾನ್ಯವಾಗಿ ಕಾಷ್ಠ ವಿಗ್ರಹಗಳ ರೂಪದಲ್ಲಿ ಪೂಜಿಸಲ್ಪಡುತ್ತಾರೆ.

ಕರ್ನಾಟಕದ ಕಾಡುಗಳು ಆನೆಗಳ ಬೀಡು. ಆನೆದಂತವು ಶಿಲ್ಪರಚನೆಗೆ ಇನ್ನೊಂದು ಅತ್ಯುತ್ತಮ ಮಾಧ್ಯಮ. ಮರದಲ್ಲಿರುವಂತೆ ದಂತಗಳಲ್ಲಿ ಅಡ್ಡ ಎಳೆಗಳಿಲ್ಲವಾದ್ದರಿಂದ ನಯ ನಾಜೂಕಿನ ಕೆತ್ತನೆ ಸಾಧ್ಯ. ದಂತಶಿಲ್ಪಗಳಿಗೆ ಆಕಾಶದೆತ್ತರದ ಬೆಲೆ!

ಮೃತ್ತಿಕಾ ಶಿಲ್ಪಗಳು

ಮಣ್ಣು ಅತಿ ಸುಲಭವಾಗಿಯೂ ಹೇರಳವಾಗಿಯೂ ಎಲ್ಲೆಡೆಯಲ್ಲಿಯೂ ಲಭ್ಯವಾಗುವ ವಸ್ತು. ಹಸಿ ಮಣ್ಣನ್ನು ಬಳಸಿಕೊಂಡು ಅದಕ್ಕೆ ಬೇಕಾದ ಆಕಾರವನ್ನು ಕೊಟ್ಟು ಪ್ರಾಣಿ, ಪಕ್ಷಿಗಳ ಗೊಂಬೆಗಳನ್ನು ಮಾಡಿರುವುದನ್ನು ಶಿಲಾಯುಗದ ಮಾನವನಲ್ಲಿಯೂ ಗುರುತಿಸಬಹುದು. ಕೊಡಗಿನಲ್ಲಿ ದೊರೆತ ಬೃಹತ್ ಶಿಲಾಯುಗದ ಎರಡು ಮಣ್ಣಿನ ಹಸುಗಳು ಇದಕ್ಕೆ ಸಾಕ್ಷಿ ನುಡಿಯುತ್ತವೆ.

ಕರ್ನಾಟಕದಲ್ಲಿ ಪ್ರಾಗಿತಿಹಾಸ ಕಾಲದಿಂದ ಶಾತವಾಹನರ ಕಾಲದವರೆಗಿನ ವಿವಿಧ ಬಗೆಯ ಮಣ್ಣಿನ ಮೂರ್ತಿಗಳು ಸಿಕ್ಕಿವೆ. ಇವು ಹೆಚ್ಚಾಗಿ ಜೇಡಿಮಣ್ಣಿನವು. ಕುಪ್ಪಗಲ್ಲು, ಬ್ರಹ್ಮಗಿರಿ, ಪಿಕ್ಲಿಹಾಳ, ಸಂಗನಕಲ್ಲು, ತೆಕ್ಕಲುಕೋಟೆ ಮೊದಲಾದ ಕಡೆಗಳಲ್ಲಿ ಪ್ರಾಣಿ ಪಕ್ಷಿಗಳ ಹಾಗೂ ಮಾನವಾಕೃತಿಯ ಮಣ್ಣಿನ ಶಿಲ್ಪಗಳು ಉತ್ಖನನದಲ್ಲಿ ದೊರೆತಿವೆ. ಗೂಳಿ, ಕುರಿ, ಹಂದಿಯ ಶಿಲ್ಪಗಳು ಹೆಚ್ಚಾಗಿದ್ದುದು ತಿಳಿದುಬರುತ್ತದೆ. ಪಿಕ್ಲಿಹಾಳದಲ್ಲಿ ದೊರೆತ ಗೊಂಬೆಗಳು ಹರಪ್ಪ ಸಂಸ್ಕೃತಿಯ ಗೊಂಬೆಗಳನ್ನು ಹೋಲುತ್ತವೆಂದು ನಂಬಲಾಗಿದೆ.

ಹಸಿಮಣ್ಣಿನಲ್ಲಿ ತಯಾರಿಸಿ ನಂತರ ಇವನ್ನು ಸುಟ್ಟು ಗಟ್ಟಿಗೊಳಿಸಲಾಗಿದೆ. ಹೀಗೆ ಸುಡುವುದರಿಂದ ಶಿಲ್ಪದ ತಾಳಿಕೆ ಹೆಚ್ಚುತ್ತದೆಂದು ಪ್ರಾಚೀನರು ಬಲ್ಲವರಾಗಿದ್ದರು. ಹದಗೊಳಿಸಿದ ಹಸಿಮಣ್ಣಿನಿಂದ ಗೊಂಬೆಗಳನ್ನು ಮಾಡಿ ಕ್ರಮಬದ್ಧವಾಗಿ ಸುಟ್ಟು ರಚಿಸಲಾದ ಶಿಲ್ಪಗಳನ್ನು ಟೆರಾಕೋಟ (ಸುಡಾವೆ ಮಣ್ಣಿನ ಮೂರ್ತಿ)ಗಳೆಂದು ಹೇಳುವುದು ವಾಡಿಕೆ.

ಮಣ್ಮೂರ್ತಿಗಳನ್ನು ಸುಡುವುದು ಒಂದು ಕುಶಲ ಕರ್ಮ. ಸುಡುವಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಅದು ಸೀಳಿ ಹೋಗುವ ಸಂಭವ ಹೆಚ್ಚು.

ಮೌರ್ಯ ಸುಂಗ ರಾಜರ ಕಾಲದ ಟೆರಾಕೋಟ ಶಿಲ್ಪಗಳಲ್ಲಿ ಸ್ತ್ರೀ ವಿಗ್ರಹಗಳೇ ಹೆಚ್ಚು. ಈ ಸಂಗತಿಯು ಮಾತೃದೇವತೆಯ ಆರಾಧನೆಗೆ ಪುಷ್ಟಿ ನೀಡುತ್ತದೆ. ಕ್ರಿ.ಶ. ಆರಂಭದ ಕಾಲದಲ್ಲಿ ಶಾತವಾಹನರು ಜೇಡಿಮಣ್ಣಿನ ಮೂರ್ತಿಗಳನ್ನು ಬಳಸುತ್ತಿದ್ದರೆಂಬುದು ಸನ್ನತಿ, ಬೆಳಗಾವಿ, ಹಂಪೆ ಮೊದಲಾದ ಕಡೆಗಳಲ್ಲಿ ದೊರೆತ ಗೊಂಬೆಗಳಿಂದ ತಿಳಿದು ಬರುತ್ತದೆ.

ಗಂಗವಾಡಿಯಲ್ಲಿನ ಗಂಗರ ಶಿಲ್ಪಗಳು ಮಣ್ಣಿನವೇ ಆಗಿರಬೇಕು. ಹೆಚ್ಚಿಗೆ ತಾಳಿಕೆ ಇರದ ಇವು ಕಾಲಗರ್ಭದಲ್ಲಿ ಅಡಗಿರಬೇಕು. ಒಂದನೆಯ ಶಿವಮಾರನ ಕಾಲದ ಮಣ್ಣಿನ ವಿಗ್ರಹವನ್ನು ಕೆಲಸೂರು ಬಸದಿಯಲ್ಲಿ ಇಂದಿಗೂ ಕಾಣಬಹುದು. ಕುಡಲೂರಿನಲ್ಲಿಯೂ ಮಣ್ಣಿನ ಮೂರ್ತಿಗಳು ದೊರೆತಿರುವುದು ಮೇಲಿನ ಮಾತಿಗೆ ಸಾಕ್ಷಿ ಒದಗಿಸುತ್ತದೆ.

ಇಂದಿಗೂ ನಾವು ಮಣ್ಣಿನ ಮೂರ್ತಿಗಳನ್ನು ಪೂಜಿಸುತ್ತಿರುವುದು ಸಾಂಸ್ಕೃತಿಕ ಪರಂಪರೆಯ ಜೀವಂತಿಕೆಯನ್ನು ಸೂಚಿಸುತ್ತದೆ. ಮಣ್ಣಿನ ಎತ್ತಿನ ಪೂಜೆ ನಡೆಯುವುದರಿಂದ ಮಣ್ಣೆತ್ತಿನ ಅಮಾವಾಸ್ಯೆ! ಗಣೇಶ ಚತುರ್ಥಿಯಂದು ಮಣ್ಣಿನ ಗಣಪತಿ ಪೂಜಿತ! ತಾಯಿ ಪಾರ್ವತಿ ಆತನನ್ನು ಮಣ್ಣಿನಿಂದಲೇ ಸೃಷ್ಟಿಸಿದಳಲ್ಲವೇ? ಹಾಗೆಯೇ ಜೋಕುಮಾರ, ಗೌರಿ ಮೊದಲಾದ ಮಣ್ಣಿನ ಮೂರ್ತಿಗಳು ನಮ್ಮ ಸಾಂಸ್ಕೃತಿಕ ಜೀವನದ ಭಾಗಗಳೇ ಆಗಿವೆ ಶತ ಶತಮಾನಗಳಿಂದಲೂ.

ಗಾರೆಗಚ್ಚಿನ ಶಿಲ್ಪಗಳು

ಕರ್ನಾಟಕದ ಶಿಲ್ಪ ಪರಂಪರೆಯಲ್ಲಿ ಗಾರೆಗಚ್ಚಿನ ಶಿಲ್ಪಗಳ ಪಾತ್ರ ಗೌಣವಾದುದೇನೂ ಅಲ್ಲ. ಆಗಮಗಳ ಕಾಲದಿಂದ ಮೊದಲ್ಗೊಂಡು ಇತ್ತೀಚಿನ ದಿನಗಳವರೆಗೂ ಈ ಶಿಲ್ಪ ಪ್ರವಾಹ ಪ್ರವಹಿಸಿದೆ. ಗಾರೆಗಚ್ಚು ವಿಭಿನ್ನ ಮಾಧ್ಯಮ. ಇದು ಸುಣ್ಣ, ಸಣ್ಣ ಮರಳು ಮತ್ತು ಸರಿಗೆಯಂತಹ ಅಂಟುವಸ್ತುವಿನ ಹದವಾದ ಮಿಶ್ರಣ. ಶಿಲೆ ಇಲ್ಲವೆ ಕಾಷ್ಠವನ್ನು ಕೆತ್ತಿ ಶಿಲ್ಪವನ್ನು ಮಾಡಿದರೆ ಗಾರೆಗಚ್ಚಿನ ಮೂರ್ತಿಗಳನ್ನು ಮೆತ್ತಿ ಮಾಡಲಾಗುತ್ತದೆ. ಈ ರೀತಿಯ ಶಿಲ್ಪರಚನೆಯ ಬಗ್ಗೆ ಕಾಮಿಕಾಗಮ, ಕಶ್ಯಪಶಿಲ್ಪ ಮೊದಲಾದ ಶಿಲ್ಪಶಾಸ್ತ್ರ ಗ್ರಂಥಗಳು ವಿವರ ನೀಡುತ್ತವೆ.

ಗಂಗರ ಸೋಮೇಶ್ವರ ದೇವಾಲಯದ ವಿಮಾನ ಭಾಗ ಹಾಗೂ ದ್ವಾರದ ಗೋಪುರಗಳು ಗಾರೆಗಚ್ಚಿನ ನಿರ್ಮಿತಿಗಳು. ನರಸ ಮಂಗಲದ (ಚಾಮರಾಜನಗರ ತಾಲೂಕು) ರಾಮೇಶ್ವರ ಗುಡಿ ಕೂಡ ಗಂಗರಹೀ. ಇದರ ಕೆಳಭಾಗ ಕಲ್ಲಿನದು, ಮೇಲ್ಭಾಗವು ಇಟ್ಟಿಗೆ ಗಾರೆಗಳ ರಚನೆ. ಇದರ ಗಾರೆ ಗಚ್ಚಿನ ಶಿಲ್ಪಗಳು. ಹರವಾದ ಎದೆ, ಮಿತವಾದ ಆಭರಣಗಳು, ತೆಳುವಾದ ಆಕರ್ಷಕ ಮೈಕಟ್ಟು, ವಿವಿಧ ಭಾವಗಳ ಮುಖಮುದ್ರೆಗಳಿಂದ ಮೋಹಕವಾಗಿವೆ.

ಚೋಳರಸರ ಮಳೂರಿನ ಅಪ್ರಮೇಯಸ್ವಾಮಿ ಗುಡಿಯ ಪ್ರವೇಶ ದ್ವಾರದ

ಗೋಪುರಗಳಲ್ಲಿ ತಳದಿಂದ ತುದಿಯವರೆಗೆ ವಿಷ್ಣುವಿನ ಗಚ್ಚಿನ ಮೂರ್ತಿಗಳಿವೆ. ನೊಳಂಬರ ಆವನಿಯ ಲಕ್ಷ್ಮಣೇಶ್ವರ, ರಾಮೇಶ್ವರ ಗುಡಿಗಳು ಹಾಗೂ ನಂದಿ, ಬೇಗೂರಿನ ಮಂದಿರಗಳ ದ್ವಾರ ಗೋಪುರಗಳಲ್ಲಿ ವಿವಿಧ ಭಂಗಿಗಳಲ್ಲಿ ನಿರ್ಮಿತವಾದ ಗಚ್ಚಿನ ಶಿಲ್ಪಗಳಿವೆ.

ಗಚ್ಚು-ಗಾರೆಯ ಶಿಲ್ಪ ಪರಂಪರೆಯನ್ನು ಗಣನೀಯ ಪ್ರಮಾಣದಲ್ಲಿ ಮುಂದುವರೆಸಿದ ಕೀರ್ತಿ ವಿಜಯನಗರ ಅರಸರಿಗೆ ಸಲ್ಲುತ್ತದೆ. ಇವರ ಕಾಲದ ಗುಡಿಗಳು ಛಾವಣಿಯವರೆಗೆ ಗಟ್ಟಿಕಲ್ಲಿನ ರಚನೆಗಳಿಂದ, ಮೇಲ್ಭಾಗದ ಅಂಚುಗಳು ಗಚ್ಚುಗಾರೆಯ ಶಿಲ್ಪಗಳಿಂದ ಸಿಂಗರಿಸಲ್ಪಟ್ಟಿವೆ. ಹಂಪೆಯ ವಿರೂಪಾಕ್ಷ ಗುಡಿಯ ಗೋಪುರದ ಅಡಿಭಾಗದಲ್ಲಿ ಬಗೆ ಬಗೆಯ ಭಂಗಿಗಳಲ್ಲಿ ಗಾರೆ ಗಚ್ಚಿನ ಶಿಲ್ಪಗಳು ಗೋಪುರದ ಘನತ್ವಕ್ಕೆ ಸೌಂದರ್ಯವನ್ನು ಬೆಸೆದಿವೆ. ದೇವಾಲಯದ ಒಳಗಡೆ ಕೂಡ ಗಾರೆ ಶಿಲ್ಪಗಳಿವೆ. ಇವುಗಳಲ್ಲಿ ಗಿರಿಜಾಕಲ್ಯಾಣ, ವಿಷ್ಣುವಿನ ದಶಾವತಾರಗಳು ಚಿತ್ತಾಕರ್ಷಕವಾಗಿವೆ. ಇಂಥ ಶಿಲ್ಪ ಶ್ರೀಮಂತಿಕೆಯ ಇನ್ನೊಂದು ಮಂದಿರವೆಂದರೆ ಬಾಲಕೃಷ್ಣಗುಡಿ. ಇದರ ಗೋಪುರದಲ್ಲಿ ಶ್ರೀಕೃಷ್ಣನು ಗೋಪಿಕಾ ಸ್ತ್ರೀಯರ ವಸ್ತ್ರಾಪಹರಣ ಮಾಡುವ ಪ್ರಸಂಗವನ್ನು ಗಚ್ಚುಗಾರೆಯ ಶಿಲ್ಪಸಮೂಹವು ಬಿಂಬಿಸಿದೆ. ಇದೊಂದು ಉತ್ಕೃಷ್ಟ ಶಿಲ್ಪರಚನೆ. ಬಗೆಬಗೆಯಾಗಿ ಲಜ್ಜಿತಗೊಂಡ ಗೋಪಿಕೆಯರು ಕಾವ್ಯಮಯವಾಗಿ ಶಿಲ್ಪಿತರಾಗಿದ್ದಾರೆ. ವಿಜಯವಿಠಲ, ಹಜಾರರಾಮ, ಅಚ್ಯುತ ಮಂದಿರಗಳ ಗೋಪುರಗಳಲ್ಲೂ ಈ ಬಗೆಯ ಶಿಲ್ಪಸಿರಿ ಇದೆ. ವಿಜಯನಗರೋತ್ತರ ಕಾಲದಲ್ಲೂ ಈ ಸಂಪ್ರದಾಯ ಮುಂದುವರೆಯಿತು ಶ್ರೀರಂಗನಾಥ ದೇವಾಲಯ, ನಂಜನಗೂಡಿನ ಶ್ರೀಕಂಠೇಶ್ವರ ಗುಡಿ, ಮೈಸೂರಿನ ಚಾಮುಂಡೇಶ್ವರಿ, ಚಾಮರಾಜನಗರದ ಚಾಮರಾಜೇಶ್ವರ ಮಂದಿರ, ಶಿವಗಂಗೆಯ ಹೊನ್ನಾದೇವಿ, ಕನಕಗಿರಿ, ಮತ್ತು ಮೇಲುಕೋಟೆ ದೇವಾಲಯಗಳಲ್ಲಿ ಈ ಶಿಲ್ಪ ನಿರ್ಮಾಣವು ಕಾಣಿಸಿಕೊಂಡಿದೆ.

ಮೂರ್ತಿಪೂಜಕರಲ್ಲದ ಮುಸ್ಲಿಂ ಅರಸರು ಶಿಲ್ಪರಚನೆಯಲ್ಲಿ ವಿಶೇಷ ಕೊಡುಗೆಯನ್ನು ನೀಡಲಿಲ್ಲವಾದರೂ ಬಿಜಾಪುರದ ಆದಿಲಶಾಹಿ ಸುಲ್ತಾನರು ಗೋಳಗುಮ್ಮಟ, ಇಬ್ರಾಹಿಂ ರೋಜಾ, ಜುಮ್ಮಾ ಮಸೀದಿ, ಗಗನಮಹಲ ಮೊದಲಾದ ಕಟ್ಟಡಗಳ ಕಮಾನು, ಬಾಗಿಲುಗಳನ್ನು ಗಾರೆಯ ಹೂಬಳ್ಳಿಗಳ ನಕ್ಷೆಗಳು ಹಾಗೂ ಜ್ಯಾಮಿತಿ ಚಿತ್ತಾರಗಳ ಅಲಂಕಾರ ರಚಿಸಿದ್ದಾರೆ. ಕುರಾನಿನ ವಾಕ್ಯಗಳನ್ನು ಕಲಾತ್ಮಕವಾಗಿ ಗಾರೆ ಗಚ್ಚಿನ ಮಾಧ್ಯಮದಲ್ಲಿ ಮೂಡಿಸಿದ್ದಾರೆ. ಟಿಪ್ಪು ಸುಲ್ತಾನನ ಮಸೀದಿ, ಅರಮನೆಗಳಲ್ಲಿಯೂ ಈ ತೆರನಾದ ಬೆಡಗನ್ನು ನೋಡಬಹುದು.

ಉಪಸಂಹಾರ

ಕರ್ನಾಟಕದ ಸಾಂಪ್ರದಾಯಿಕ ಶಿಲ್ಪಕಲೆಯು, ಭಾರತೀಯ ಕಲೆಯಂತೆ ಧರ್ಮಗಳಿಂದ ಪ್ರೇರಣೆ ಪಡೆದುದೇ ಆಗಿದೆ. ಅಂದ ಮಾತ್ರಕ್ಕೆ ಎಲ್ಲ ಕಲೆಯೂ ಧಾರ್ಮಿಕವಾಗಿದೆ ಎಂದರ್ಥವಲ್ಲ. ಶಿಲ್ಪ ಪರಿಸರದ ಕೂಸಲ್ಲವೇ? ಶಿಲ್ಪಿಯು ಬದುಕಿನ ನೂರೆಂಟು ಮುಖಗಳನ್ನು ತನ್ನ ಕಲಾಕೃತಿಗಳ ಮೂಲಕ ಬಿಂಬಿಸಿದ್ದಾನೆ. ಸಾಂಪ್ರದಾಯಿಕ ಶಿಲ್ಪಕಲೆಯಲ್ಲಿ ಕಾಣಸಿಗುವ ದೇವಶಿಲ್ಪಗಳಲ್ಲಿ ಸಾಂಕೇತಿಕತೆ ಇದ್ದರೆ ಸಾಮಾಜಿಕ ಚಿತ್ರಣ ನೀಡುವ ಮಾನವ ಶಿಲ್ಪಗಳಲ್ಲಿ ವಾಸ್ತವಿಕತೆ ಇದೆ. ಒಂದು ಆತ್ಮಿಕ, ಇನ್ನೊಂದು ಭೌತಿಕ. ಕರ್ನಾಟಕದ ಸಾಂಪ್ರದಾಯಿಕ ಶಿಲ್ಪಕಲೆ ಅವೆರಡರ ಕೂಡಲ ಸಂಗಮ!

ಇಂದು ಕಲೆ ಹಾಗೂ ಜನಸಾಮಾನ್ಯರ ನಡುವೆ ಭಾರೀ ಅಂತರವಿದೆ. ಇಂದಿನ ಸಮಕಾಲೀನ ಕಲೆಯು ಜನಸಾಮಾನ್ಯರಿಗೆ ಅರ್ಥವಾಗದಿರುವುದೇ ಇದಕ್ಕೆ ಕಾರಣ ಎಂದು ಹಲವರ ಅಭಿಪ್ರಾಯ. ದೃಶ್ಯ ಕಲೆಗಳನ್ನು ಆಸ್ವಾದಿಸುವ ದೃಷ್ಟಿಯಿಂದ ನಮ್ಮ ಸಾಮಾನ್ಯ ಶಿಕ್ಷಣದಲ್ಲೂ ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ. ಅಂತೆಯೇ ಈ ಕೊರತೆಗಳನ್ನು ಸ್ವಲ್ಪವಾದರೂ ತುಂಬುವುದು ಈ ಜನಪ್ರಿಯ ಕಲಾಮಾಲಿಕೆಯ ಆಶಯ. ಹೀಗೆ ಸಾಮಾನ್ಯರಿಗೆ ದೃಶ್ಯಕಲೆಗಳ ಪ್ರಾಥಮಿಕ ಜ್ಞಾನ ಒದಗಿಸುವ ದೃಷ್ಟಿಯಿಂದಲೇ ಇದನ್ನು ರೂಪಿಸಲಾಗಿದೆ. ಇದರಲ್ಲಿ ದೃಶ್ಯಕಲೆಯ ತಾತ್ವಿಕ ಅಂಶಗಳು, ಮಾಧ್ಯಮಗಳು, ತಂತ್ರಗಳು, ಇತಿಹಾಸ, ಆಧುನಿಕ ಕಲಾ ಪಂಥಗಳು ಇತ್ಯಾದಿ ಹಲವು ವಿಷಯಗಳನ್ನು ಕುರಿತಂತಹ ಹೊತ್ತಿಗೆಗಳನ್ನು ತರುತ್ತಿದ್ದೇವೆ. ತನ್ಮೂಲಕ ದೃಶ್ಯಕಲೆಯನ್ನು ಆಸ್ವಾದಿಸುವ ದಿಸೆಯಲ್ಲಿ ಹೆಚ್ಚಿನ ಜನರು ತೊಡಗುತ್ತಾರೆಂಬ ಮಹತ್ವಾಕಾಂಕ್ಷೆ ಈ ಮಾಲಿಕೆಯದು. ಹೀಗೆ ಜನರನ್ನು 'ಸಹೃದಯ' ರನ್ನಾಗಿಸುವ ದಿಸೆಯಲ್ಲಿ ಇದೊಂದು ಪುಟ್ಟ ಪ್ರಯತ್ನ.

ಚಿ. ಸು. ಕೃಷ್ಣ ಸೆಟ್ಟಿ
ಸಂಪಾದಕರು